ಫೆಬ್ರವರಿ ೨೦೨೬

# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ



### ಆರ್ಬಿಟ್ ಸಮಾಜ ಸೇವಾ ಸಂಸ್ಥೆ ,ಹುಮನಾಬಾದ ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ



ಡಾ॥ ರಾಬರ್ಟ್ ಮೈಕಲ್ ಮಿರಾಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ಫಾದರ್॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ

## “ಅಲೂರ ಗ್ರಾಮದಲ್ಲಿ ಸಮುದಾಯ ಸಭೆ ಮತ್ತು ಮಕ್ಕಳ ಮನೆಯ ಉದ್ದೇಶಗಳು ಮತ್ತು ಸದುಪಯೋಗ ಬಗ್ಗೆ ಮಾಹಿತಿ”

10 ಜನವರಿ 2026ರಂದು ಮಕ್ಕಳ ಮನೆ ಕಾರ್ಯಕ್ರಮದ ಸಂಯೋಜಕರಾದ ಶ್ರೀಯುತ ಚಂದ್ರಕಾಂತ ರವರು ಮಕ್ಕಳ ಮನೆಯ ಬೇರೆಬೇರೆ ರಾಜ್ಯದಲ್ಲಿರುವಂತ ರಾಜ್ಯಗಳ ಬಗ್ಗೆ ಮಾಹಿತಿ ನೀಡಿದರು. ಒಟ್ಟು ಭಾರತ ದೇಶದಲ್ಲಿ 1350 ಮಕ್ಕಳ ಮನೆಯನ್ನು ಅಜೀಂ ಪ್ರೇಮಜಿ ಸಂಸ್ಥೆಯವರು ಸ್ಥಾಪಿಸಿದರು. ಈ ಮಕ್ಕಳ ಮನೆಯಲ್ಲಿ ಸುಮಾರು 25 ಸಾವಿರಕ್ಕಿಂತ ಹೆಚ್ಚು ಮಕ್ಕಳು ಭಾಗವಹಿಸಿ ಅದರ ಉಪಯೋಗ ಪಡೆದುಕೊಳ್ಳುವಂತೆ ತಾಯಂದಿರಿಗೆ, ಮುಖಂಡರಿಗೆ ಮಾಹಿತಿಯನ್ನು ತಿಳಿಸಿದರು. ತದನಂತರ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಯಡ್ರಾಮಿ ಮತ್ತು ಜೇವರ್ಗಿ ತಾಲೂಕಿಗೆ ಮೂರು ವರ್ಷದವರೆಗೆ ಮುಖಮನೆಯನ್ನು ಸೇವಾ ಸಂಘಸಂಸ್ಥೆಯ ಸಹಾಯಧನವನ್ನು ನೀಡಿದ್ದು, ಮೊದಲಿಗೆ ಇಜೇರಿ ಗ್ರಾಮದಲ್ಲಿ ಎರಡು ಮಕ್ಕಳ ಮನೆಯನ್ನು ಪ್ರಾರಂಭ ಮಾಡಲಾಗಿದ್ದು ಎರಡು ಮುಖಮನೆಯಲ್ಲಿ ಸುಮಾರು 18 ರಿಂದ 20 ಮಕ್ಕಳು ಭಾಗವಹಿಸಿದ್ದು. ಪ್ರತಿದಿನ ಸದುಪಯೋಗ ಪಡೆದುಕೊಳ್ಳುತ್ತಿರುವುದು. ಮಕ್ಕಳ ಮನೆಯ ಮೂರು ಉದೇಶಗಳನ್ನು ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಈ ಮಕ್ಕಳ ಮನೆಗೆ ಅವಕಾಶ ಇರುವುದು. ಪ್ರವೇಶವನ್ನು ಸಕ್ರಿಯಗೊಳಿಸುವುದು ಮತ್ತು ಪೂರಕ ಆಹಾರ, ಬಾಲ್ಯದ ಅಭಿವೃದ್ಧಿ ಮತ್ತು ಸರ್ಕಾರದ ಯೋಜನೆಗಳಿಗೆ ಪ್ರವೇಶವನ್ನು ಸುಗಮಗೊಳಿಸುವುದು. ಹಾಗೂ ಬೆಳವಣಿಗೆ ಕುಂಠಿತ ಕಡಿಮೆತೂಕ ಮತ್ತು ಕ್ಷಣಿಸಿದ ಮಕ್ಕಳನ್ನು 7 ತಿಂಗಳು 3 ವರ್ಷದ ವಯಸ್ಸಿನ ಗುರುತಿಸುವುದು. ಅವರನ್ನು ಆರೋಗ್ಯ ಸೌಲಭ್ಯಗಳಿಗಾಗಿ ನೋಂದಾಯಿಸುವುದು. ಹಾಗೂ ಅನುಸರಣೆ ಮಾಡುವುದರ ಕುರಿತು ಮಾಹಿತಿಯನ್ನು ನೀಡಿದರು. ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಯುತ ನಂದಕುಮಾರ ದೊರೆ ಅವರು ಈ ಮಕ್ಕಳ ಮನೆ ಎರಡನೆಯದಾಗಿ ಇಲ್ಲಿ ಉದ್ಘಾಟನೆಯನ್ನು ಮಾಡಿರುವಂತ ಸೇವಾ ಸಂಗಮ ಸಂಸ್ಥೆಯವರಿಗೆ ಧನ್ಯವಾದ ತಿಳಿಸುದ್ದರು. ಮಕ್ಕಳಿಗೆ ಪ್ರತಿ ನಿತ್ಯ ಇಲ್ಲಿ ಕಳಿಸಿಕೊಡುವುದು ಮತ್ತು ನಾವು ನಮ್ಮ ಮಕ್ಕಳಿಗೆ ನೋಡೋಕ್ಕಿಂತ ಹೆಚ್ಚು ಇಲ್ಲಿ ಅವರು ಕಾಳಜಿಯನು, ವಹಿಸುತಿರುವದರ ಬಗೆ ಗಾಮಸ ತಾಯಂದಿರಿಗೆ ತಿಳಿಸಿದರು.









# “ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಉಚಿತ ಕಾನೂನು ಸೇವೆಗಳ ಕುರಿತು ತರಬೇತಿ”







19 ಜನವರಿ 2026ರಂದು ಚಿತ್ತಗುಪ್ಪ ತಾಲೂಕಿನ ಮನ್ನಏಖೇಳಿ ಗ್ರಾಮದಲ್ಲಿ ಕಿತ್ತೂರು ಚೆನ್ನಮ್ಮ ಮಹಾಸಂಗದ ಸದಸ್ಯರಿಗೆ ಉಚಿತ ಕಾನೂನು ಸೇವೆಗಳ ಕುರಿತು ತರಬೇತಿ ಹಮ್ಮಿಕೊಳ್ಳಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ರೀಟಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಅವರು ಉಚಿತ ಕಾನೂನು ಸೇವೆ ಎಂದರೇನು? ಎಂಬುದನ್ನು ವಿವರಿಸಿದರು. ಹಣಕಾಸಿನ ಕೊರತೆಯಿಂದಾಗಿ ವಕೀಲರನ್ನು ನೇಮಿಸಲು ಅಥವಾ ತಮ್ಮ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗದವರಿಗೆ ಸರ್ಕಾರವೇ ಉಚಿತವಾಗಿ ಕಾನೂನು ಸೇವೆ ಒದಗಿಸುತ್ತದೆ ಎಂದು ತಿಳಿಸಿದರು. ಉಚಿತ ಕಾನೂನು ಸಹಾಯದ ಮೂಲಕ ಉಚಿತ ವಕೀಲರ ಸೇವೆ, ಕಾನೂನು ಸಲಹೆ ಹಾಗೂ ನ್ಯಾಯಾಲಯದಲ್ಲಿ ವಾದಿಸುವ ವ್ಯವಸ್ಥೆ ದೊರೆಯುತ್ತದೆ ಎಂದರು. ಮಹಿಳೆಯರು, ಮಕ್ಕಳು, ಅಂಗವಿಕಲರು, ವೃದ್ಧರು, ಕಾರ್ಮಿಕರು, ಬಡವರು ಹಾಗೂ ಕಡಿಮೆ ಆದಾಯ ಹೊಂದಿರುವವರು ಈ ಸೇವೆಗೆ ಅರ್ಹರು ಎಂದು ತಿಳಿಸಿದರು. ತಾಲೂಕು, ಜಿಲ್ಲಾ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು ಹಾಗೂ ಲೋಕ ಅದಾಲತ್ ಮೂಲಕ ಈ ಸೇವೆ ಪಡೆಯಬಹುದೆಂದು ವಿವರಿಸಿದರು. ಈ ಸೌಲಭ್ಯಗಳ ಪ್ರಯೋಜನವನ್ನು ಎಲ್ಲರೂ ಪಡೆದುಕೊಳ್ಳಬೇಕೆಂದು ಮನವರಿಕೆ ಮಾಡಿದರು. ವರದಿಗಾರರು: ಶ್ರೀಮತಿ ರೀಟಾ

## “ಸ್ವ-ಸಹಾಯ ಸಂಘಗಳ ಸದಸ್ಯರಿಗೆ ನಾಯಕತ್ವ ಕುರಿತು ತರಬೇತಿ”







07 ಜನವರಿ 2026ರಂದು ಭಾಲ್ಕಿ ತಾಲೂಕಿನ ಕೋಸಂ ಗ್ರಾಮದಲ್ಲಿರುವ ಸಂತೋಷಿ ಮಾತಾ ಮತ್ತು ಭಾಗ್ಯವಂತಿ ಸ್ವಸಹಾಯ ಮಹಿಳಾ ಸಂಘಗಳ ಸದಸ್ಯರಿಗೆ ನಾಯಕತ್ವ ಕುರಿತು ತರಬೇತಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಕರ್ತರಾದ ಶ್ರೀ ಪ್ರಭು ಅವರು ಭಾಗವಹಿಸಿದರು. ತರಬೇತಿ ಆರಂಭದಲ್ಲಿ “ನಾಯಕ ಎಂದರೆ ಏನು? ನಾಯಕತ್ವದ ಗುಣಲಕ್ಷಣಗಳು ಯಾವುವು?” ಎಂಬ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆ ನಡೆಸಿದರು. ಸ್ವಸಹಾಯ ಸಂಘಗಳಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವಾಗ ಅವರಿಗೆ ನಾಯಕತ್ವದ ಜವಾಬ್ದಾರಿ ನೀಡಲಾಗುತ್ತದೆ ಎಂದು ತಿಳಿಸಿದರು. ಸಂಘದ ನೀತಿ-ನಿಯಮಗಳನ್ನು ಉಲ್ಲಂಘಿಸದೆ ಕಾರ್ಯನಿರ್ವಹಿಸುವುದು ಅಗತ್ಯವೆಂದೂ, ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿರುವ ಮಹಿಳೆಯರು ಹಾಗೂ ಪುರುಷರು ಸಹ ಉತ್ತಮ ನಾಯಕರಾಗಬಹುದು ಎಂದೂ ವಿವರಿಸಿದರು. ನಾಯಕತ್ವವನ್ನು ಬೆಳೆಸಿಕೊಳ್ಳಲು ಸಮಾಜದಲ್ಲಿ ಎಲ್ಲರನ್ನೂ ಗೌರವಿಸುವುದು, ಪ್ರೀತಿಸುವುದು, ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಹುಡುಕುವುದು ಮುಖ್ಯವೆಂದು ತಿಳಿಸಿದರು. ಯಾವುದೇ ವಿಷಯವನ್ನು ನ್ಯಾಯಯುತವಾಗಿ ನಿರ್ಣಯಿಸುವ ಸಾಮರ್ಥ್ಯ ಇರಬೇಕು. ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸಲು ಈ ರೀತಿಯ ನಾಯಕತ್ವ ಗುಣಗಳು ಅಗತ್ಯವೆಂದೂ, ವಿವಿಧ ಇಲಾಖೆಗಳೊಂದಿಗೆ ಉತ್ತಮ ಜಾಲಬಂಧನ ಬೆಳೆಸಿಕೊಳ್ಳಬೇಕೆಂದೂ ತಿಳಿಸಿದರು. ಈ ತರಬೇತಿಯಲ್ಲಿ ಒಟ್ಟು 14 ಮಹಿಳೆಯರು ಭಾಗವಹಿಸಿದ್ದರು. ಸಭೆಯು ಸರಿಯಾಗಿ ಮಧ್ಯಾಹ್ನ 12:30ಕ್ಕೆ ಶ್ರೀಮತಿ ರೇಣುಕಾ ಅವರ ಧನ್ಯವಾದಗಳೊಂದಿಗೆ ಮುಕ್ತಾಯವಾಯಿತು. ವರದಿಗಾರರು: ಶ್ರೀಮಾನ ಪ್ರಭು

## “ಗ್ರಾಮ ಪಂಚಾಯಿತಿಗೆ ದೂರು! ಬೋರ್ವೆಲ್ ವ್ಯವಸ್ಥೆ ಹಾಗೂ ಟ್ಯಾಂಕ್ ನಿರ್ಮಾಣ”



ಹಳ್ಳಿ ಹೆಸರು: ಚಳ್ಕಪುರ, ಸಂಘದ ಹೆಸರು: ಶಕ್ತಿ ಸೂರ್ಯೋದಯ, ತಾಲೂಕು: ಭಾಲ್ಕಿ, ಸಂಘದ ಪರಿಕಲ್ಪನೆಯ ಕುರಿತು ತಿಳಿದಿರದ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳು ಸಂಘ ರಚನೆಗೆ ಸಹಕರಿಸಿದರು. ಸಂಘ ರಚನೆಯಾಗಿ ಸುಮಾರು 20 ವರ್ಷಗಳು ಕಳೆದಿವೆ. ಚಳ್ಕಪುರ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿತ್ತು. ಈ ಕುರಿತು ಸಂಘದ ಸದಸ್ಯರು ಎರಡು ಬಾರಿ ಗ್ರಾಮ ಪಂಚಾಯಿತಿಗೆ ದೂರು ನೀಡಿದರು. ಇತ್ತೀಚಿನ ಎರಡು ತಿಂಗಳಲ್ಲಿ ಮತ್ತೆ ಸಂಘದವರು ಗ್ರಾಮಸ್ಥರೊಂದಿಗೆ ಸೇರಿ ಪಂಚಾಯಿತಿಗೆ ಮನವಿ ಸಲ್ಲಿಸಿದ ಪರಿಣಾಮವಾಗಿ ಕುಡಿಯುವ ನೀರಿಗಾಗಿ ಬೋರ್ವೆಲ್ ವ್ಯವಸ್ಥೆ ಹಾಗೂ ನೀರಿನ ಟ್ಯಾಂಕ್ ನಿರ್ಮಾಣ ಮಾಡಿಕೊಡಲಾಗಿದೆ. ಈ ನೀರಿನ ವ್ಯವಸ್ಥೆ ಕಲ್ಪಿಸಲು ಸಹಕರಿಸಿದ ಆರ್ಬಿಟ್ ಸಂಸ್ಥೆಗೆ ನಮ್ಮ ಸಂಘದ ಹಾಗೂ ಸಮುದಾಯದ ಜನರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ ಎಂದು ಸಂಘದವರು ತಿಳಿಸಿದರು. ವರದಿಗಾರರು: ಶ್ರೀಮತಿ ಅಮೀತಾ

## "ಮಹಿಳಾ ಶಕ್ತಿ ಮತ್ತು ಪ್ರೇಮಾಂಜಲಿ ಸಂಘಗಳ ಸದಸ್ಯರಿಗೆ ಸರ್ಕಾರಿ ಸೌಲಭ್ಯಗಳ ಕುರಿತು ತರಬೇತಿ"





06 ಜನವರಿ 2026ರಂದು ಭಾಲ್ಕಿ ತಾಲೂಕಿನ ಸಿದ್ದೇಶ್ವರ ಗ್ರಾಮದಲ್ಲಿರುವ ಮಹಿಳಾ ಶಕ್ತಿ ಮತ್ತು ಪ್ರೇಮಾಂಜಲಿ ಸ್ವಸಹಾಯ ಸಂಘಗಳ ಸದಸ್ಯರಿಗೆ ಸರ್ಕಾರಿ ಸೌಲಭ್ಯಗಳ ಕುರಿತು ತರಬೇತಿ ನೀಡಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಸಮಾಜ ಕಾರ್ಯಕರ್ತರಾದ ಶ್ರೀ ಪ್ರಭು ಅವರು ಭಾಗವಹಿಸಿದ್ದರು. ಅವರು ಸರ್ಕಾರದಿಂದ ಲಭ್ಯವಿರುವ ವಿವಿಧ ಮೂಲ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಉದಾಹರಣೆಗೆ, ಗ್ರಾಮ ಪಂಚಾಯಿತಿಯಿಂದ ದೊರೆಯುವ ವಸತಿ ಯೋಜನೆಗಳು, ಬೀದಿ ದೀಪಗಳು, ಸಿಸಿ ರಸ್ತೆಗಳು, ಚರಂಡಿ ವ್ಯವಸ್ಥೆ, ವಿಧವಾ ವೇತನ, ಅಂಗವಿಕಲರಿಗೆ ಯುಡಿಐಡಿ ಕಾರ್ಡ್‌ಗಳು, ವೃದ್ಧಾಪ್ಯ ವೇತನ, ಗುರುತಿನ ಚೀಟಿ, ವಿದ್ಯಾರ್ಥಿ ವೇತನ, ಕಾರ್ಮಿಕರ ಕಾರ್ಡ್, ಉದ್ಯೋಗಕ್ಕಾಗಿ ಸಾಲದ ಅರ್ಜಿ ಮುಂತಾದ ಅನೇಕ ಯೋಜನೆಗಳನ್ನು ಸರ್ಕಾರದಿಂದ ಪಡೆದುಕೊಳ್ಳಬಹುದೆಂದು ತಿಳಿಸಿದರು. ಈ ತರಬೇತಿಯ ಮುಖ್ಯ ಉದ್ದೇಶವೆಂದರೆ, ಸಂಬಂಧಿತ ಇಲಾಖೆಗಳ ಭೇಟಿ ನೀಡಿ ಈ ಸೌಲಭ್ಯಗಳ ಪ್ರಯೋಜನವನ್ನು ಪಡೆದುಕೊಳ್ಳುವುದು ಹಾಗೂ ತಾವು ತಿಳಿದುಕೊಂಡ ಮಾಹಿತಿಯನ್ನು ಕುಟುಂಬದವರಿಗೆ, ವಠಾರಕ್ಕೆ ಮತ್ತು ಹಳ್ಳಿಯ ಇತರರಿಗೆ ತಿಳಿಸುವುದಾಗಿದೆ. ಈ ಸಭೆಯಲ್ಲಿ ಒಟ್ಟು 12 ಸದಸ್ಯರು ಭಾಗವಹಿಸಿದ್ದರು. ಸಭೆಯು ಸರಿಯಾಗಿ ಮಧ್ಯಾಹ್ನ 12:45 ಕ್ಕೆ ಶ್ರೀಮತಿ ಲಕ್ಷ್ಮಿ ಅವರ ಧನ್ಯವಾದಗಳೊಂದಿಗೆ ಮುಕ್ತಾಯವಾಯಿತು. ವರದಿಗಾರರು: ಶ್ರೀಮಾನ ಪ್ರಭು

## "ಸಂಜನಾ ಮಹಾಸಂಗದ ಮಹಿಳೆಯರಿಗೆ ಯೋಜನೆಯ ಗುರಿ ಉದ್ದೇಶಗಳ ಕುರಿತು ಚರ್ಚೆ"



29 ಜನವರಿ 2026ರಂದು ಹುಮ್ನಾಬಾದ್ ತಾಲೂಕಿನ ದುಮ್ಮನಸೂರು ಗ್ರಾಮದ ಅಡಿಯಲ್ಲಿ ಬರುವ ಸಂಜನಾ ಮಹಾಸಂಗದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಮತ್ತು ಮಹಿಳಾ ಸಬಲೀಕರಣ ಯೋಜನೆಯ ರಾಜ್ಯ ಸಲಹಾ ಸಂಯೋಜಕರಾದ ಸಿಸ್ಟರ್ ನೆನ್ನಿ ಅವರು ಯೋಜನೆಯ ಗುರಿ–ಉದ್ದೇಶಗಳ ಕುರಿತು ಚರ್ಚೆ ನಡೆಸಿದರು. ಮಹಾಸಂಗ ರಚನೆಯ ಉದ್ದೇಶ, ಅದರಿಂದಾಗುವ ಪ್ರಯೋಜನಗಳು ಮತ್ತು ಐದು ರಿಂದ ಆರು ಸಂಘಗಳನ್ನು ಒಳಗೊಂಡು ಮಹಾಸಂಗ ರಚಿಸಬೇಕೆಂಬುದನ್ನು ವಿವರಿಸಿದರು. ಈ ಸಂಘಗಳು ಸಂಸ್ಥೆಯದ್ದಲ್ಲ, ಮಹಿಳೆಯರದ್ದೇ ಎಂಬ ಭಾವನೆಯೊಂದಿಗೆ ತಾವೇ ಸಂಘಗಳನ್ನು ಬಲಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಯೋಜನೆಯ ಪ್ರಮುಖ ಗುರಿ ಮಹಿಳೆಯರು ನಾಯಕತ್ವದಲ್ಲಿ ಬೆಳೆಯುವುದೆಂದು ತಿಳಿಸಿದರು. ಈ ಸಭೆಯಲ್ಲಿ 12 ಸದಸ್ಯರು ಭಾಗವಹಿಸಿದರು. ಅದೇ ದಿನ ಹುಮ್ನಾಬಾದ್–ಭಾಲ್ಕಿ ತಾಲೂಕಿನ ಆರು ಗ್ರಾಮಗಳ ಅಡಿಯಲ್ಲಿ ಬರುವ ಆರು ಮಹಾಸಂಗಗಳ ಮಹಿಳೆಯರೊಂದಿಗೆ ಸಹ ಇದೇ ವಿಷಯದ ಕುರಿತು ಚರ್ಚೆ ನಡೆಸಲಾಯಿತು. ಈ ಸಭೆಯಲ್ಲಿ ಒಟ್ಟು 57 ಮಹಿಳೆಯರು ಭಾಗವಹಿಸಿ ಯೋಜನೆಯ ಗುರಿ–ಉದ್ದೇಶಗಳ ಕುರಿತು ಸ್ಪಷ್ಟತೆ ಪಡೆದುಕೊಂಡರು. ವರದಿಗಾರರು: ಶ್ರೀಮತಿ ಸಬಿತಾ



## "ಸರ್ಕಾರಿ ಸೌಲಭ್ಯಗಳನ್ನು ಜನರಿಗೆ ಪಡೆದುಕೊಳ್ಳಲು ಸಹಾಯ ಮಾಡಿದ ಮಹಿಳೆ"



ಹೆಸರು: ಜಗದೇವಿ ಗಂಡನ ಹೆಸರು: ಹೌಗಪ್ಪ ಸ್ವಾಮಿ ಹಳ್ಳಿ: ಡೋಣಗಾಪುರ್ ಸಂಘದ ಹೆಸರು: ನೀಲಾಂಬಿಕ. ಶ್ರೀಮತಿ ಜಗದೇವಿ ಅವರು ಬಿಪಿಎಲ್ ಕಾರ್ಡ್ ಹೊಂದಿದ್ದು, ಇಬ್ಬರು ಗಂಡು ಮಕ್ಕಳು ಹಾಗೂ ಒಂದು ಹೆಣ್ಣು ಮಗುವಿದ್ದಾರೆ. ಜೀವನ ಸಾಗಿಸುವುದು ಕಷ್ಟಕರವಾಗಿದ್ದರೂ, ಅವರು ಆರ್ಬಿಟ್ ಸಂಸ್ಥೆಯ ನೀಲಾಂಬಿಕ ಸಂಘದಲ್ಲಿ ಸೇರಿ ಬ್ಯಾಂಕ್ ಸಾಲ, ಉಳಿತಾಯ ಮತ್ತು ವಿವಿಧ ತರಬೇತಿಗಳನ್ನು ಪಡೆದುಕೊಂಡರು. ಇದರ ಪರಿಣಾಮವಾಗಿ ಮಕ್ಕಳಿಗೆ ಶಿಕ್ಷಣ ನೀಡಲು ಸಾಧ್ಯವಾಯಿತು. ಕಳೆದ 15 ವರ್ಷಗಳಿಂದ ಸಂಘದೊಂದಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಾ, ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಇತರ ಸಂಘಗಳಿಗೆ ಉಳಿತಾಯ ಸಾಲದ ಕುರಿತು ಮಾಹಿತಿ ನೀಡುತ್ತಾ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ ಸೇರಿದಂತೆ ಹಲವು ಸರ್ಕಾರಿ ಸೌಲಭ್ಯಗಳನ್ನು ಜನರಿಗೆ ಪಡೆದುಕೊಳ್ಳಲು ಸಹಾಯ ಮಾಡುತ್ತಿದ್ದಾರೆ. ಜೊತೆಗೆ ಫೋನ್ಪೇ, ವಾಟ್ಸಪ್ ಬಳಕೆ ಕುರಿತು ಸಹ ಸಮುದಾಯಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. ಅವರ ಅನಿಸಿಕೆ: ನಾನು ಹಿಂದೆ ಮನೆಲ್ಲೇ ಇದ್ದೆ. ಆರ್ಬಿಟ್ ಸಂಸ್ಥೆಯಿಂದ ಮಾಹಿತಿ ಮತ್ತು ತರಬೇತಿ ಪಡೆದು ಇಂದು ಉದ್ಯೋಗದಲ್ಲಿ ತೊಡಗಿದ್ದೇನೆ. ಇದಕ್ಕೆ ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು" ಎಂದು ಅವರು ಹೇಳಿದರು.

ವರದಿಗಾರರು: ಶ್ರೀಮತಿ ಸುಜಾತ

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ತಡೋಳಾ ಗ್ರಾಮದ ಉಪಕೇಂದ್ರದಲ್ಲಿ ವಿಶೇಷ ಚೇತನ ಮಕ್ಕಳಿಗ್ಗೆ ಚಟುವಟಿಕೆ”



22 ಜನವರಿ 2026ರಂದು ಬಸವಕಲ್ಯಾಣ ತಾಲೂಕಿನ ತಡೋಳಾ ಗ್ರಾಮದ ಉಪಕೇಂದ್ರದಲ್ಲಿ ವಿಶೇಷ ಚೇತನ ಮಕ್ಕಳಿಗ್ಗೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಮತ್ತು ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಲಕ್ಷ್ಮಿ ರವರು ಭಾಗವಹಿಸಿ ಮಕ್ಕಳಿಗೆ ಚಟುವಟಿಕೆ ಮಾಡಿಸುವಲ್ಲಿ ಸಹಕಾರವನ್ನು ನೀಡಿದರು. ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಬೆಳವಣಿಗೆಯಿಂದ ಕುಂಠಿತಗೊಂಡಿರುವ ಮಕ್ಕಳಿಗೆ ಎರಡು ಅಕ್ಷರದ ಶಬ್ದಗಳು, ಮೂರಕ್ಷರ ಶಬ್ದಗಳಿಂದ ಉಚ್ಚಾರಣೆ ಮಾಡಲು ಪ್ರಯೋಗಿಕವಾಗಿ ತಿಳಿಸಲಾಯಿತು. ಹಾಗೂ ಪ್ರಾಣಿಗಳ ಚಿತ್ರವನ್ನು ತೋರಿಸಿ ಹೆಸರು ಹೇಳುವಂತಹ ಚಟುವಟಿಕೆ, ಮಕ್ಕಳಿಗೆ ಪ್ರಾಥಮಿಕವಾಗಿ ಬಣ್ಣಗಳನ್ನು ಗುರುತಿಸುವ ಚಟುವಟಿಕೆ, ಸಿಪಿ ಮಕ್ಕಳಿಗೆ ಗೋಡೆಯ, ಬುಟ್ಟಿಗಳ ಸಹಾಯದಿಂದ ಕೂರಿಸುವ ಚಟುವಟಿಕೆ ಹಾಗೂ ನಿಲ್ಲಿಸುವಂತಹ ಚಟುವಟಿಕೆ ಕೂಡ ನೀಡಲಾಯಿತು. ಜೊತೆಗೆ ಮಕ್ಕಳಿಗೆ ಸಾಮಾನ್ಯ ಮಕ್ಕಳು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಪರಸ್ಪರ ಸಹಾಯವನ್ನು ಮಾಡಬೇಕೆಂದು ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳಿಗೆ ಮಾಹಿತಿಯನ್ನು ನೀಡಿದರು. ಜೊತೆಗೆ ಮಕ್ಕಳಿಗೆ ಆಟದ ಜೊತೆಗೆ ದೈಹಿಕವಾಗಿ ಬದಲಾವಣೆಯನ್ನು ಹೊಂದುಬಹುದೆಂದು ಮಾಹಿತಿ ತಿಳಿಸಲಾಯಿತು.

ವರದಿಗಾರರು: ಶ್ರೀಮತಿ ಕವಿತಾ

### “ಮದರ್ ಚಾಂಪಿಯನ್ಸ್ ಸೆಶನ್ ಕೌನ್ಸಿಲಿಂಗ್ ಮನಶಾಸ್ತ್ರಜ್ಞ ಮತ್ತು ವರ್ತನೆಯ ವಿಶ್ಲೇಷಣೆಯ ಚಿಕಿತ್ಸಕ ಕುರಿತು ಮಾಹಿತಿ”



09 ಜನವರಿ 2026ರಂದು ಹುಮ್ನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ಚಾಂಪಿಯನ್ಸ್ ಸೆಶನ್ ನಾಲ್ಕು ನಡೆಸಲಾಯಿತು. ಮಕ್ಕಳ ನಡವಳಿಕೆಯ ಮಧ್ಯಸ್ಥಿಕೆಯ ಕುರಿತು ಕೌನ್ಸಿಲಿಂಗ್ ಮನಶಾಸ್ತ್ರಜ್ಞ ಮತ್ತು ವರ್ತನೆಯ ವಿಶ್ಲೇಷಣೆಯ ಚಿಕಿತ್ಸಕ ಕುರಿತು ಮಾಹಿತಿ ನೀಡಲಾಯಿತು. ಅಂಗವಿಕಲರಿಗೆ ಸಮಾನತೆ, ಘನತೆ ಮತ್ತು ನ್ಯಾಯವನ್ನು ಖಾತರಿಪಡಿಸುವುದು. ಸಮಗ್ರ ಪರಿಸರ ವ್ಯವಸ್ಥೆಯನ್ನು ಪೋಷಿಸಿ ಮತ್ತು ಜೀವನಚಕ್ರ ವಿಧಾನದ ಮೂಲಕ ಅಂಗಲ ಅಂಗವಿಕಲತೆಗೆ ಸಮಗ್ರ ಪುನರ್ವಸತಿಯ ಸೇವೆಗಳು. ಹಕ್ಕುಗಳು ಅರ್ಹತೆಗಳು ಸಮಾನ ಅವಕಾಶಗಳು ಮತ್ತು ಘನತೆಯನ್ನು ಪಡೆಯಲು ಅವಕಾಶ ನೀಡುವುದು. ಎಬಿಎ ಚಿಕಿತ್ಸೆಯ ಪರಿಚಯ–ಎಬಿಎ–ಅನ್ವಯಿಕ ವರ್ತನೆಯ ವಿಶ್ಲೇಷಣೆ ನಡವಳಿಕೆಯನ್ನು ಅರ್ಥ ಮಾಡಿಕೊಳ್ಳುವ ಮತ್ತು ಮಾರ್ಪಡಿಸುವ ವಿಜ್ಞಾನ ಆಧಾರಿತ ವಿಧಾನವಾಗಿದೆ. ಇದನ್ನು ಆಟಿಸಂ ಮತ್ತು ಬೆಳವಣಿಗೆಯ ಅಸ್ವಸ್ಥಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಸಹಾಯ ಮಾಡಲು ವ್ಯಾಪಕವಾಗಿ ಬಳಸಲಾಗುತ್ತದೆ. ಎಬಿಎ ಎಂದರೇನು? ಜನರ ಜೀವನವನ್ನು ಹೆಚ್ಚಿಸುವ ಮತ್ತು ಸುಧಾರಿಸುವ ನಡವಳಕ್ಕೆ ಸುಧಾರಣೆಗಳು. ನಿರ್ದಿಷ್ಟ ಮತ್ತು ಅಳೆಬಹುದಾದ ಗುರಿ ನಡವಳಿಕೆಗಳು ನಾವು ಹೆಚ್ಚಾಗಲು ಮತ್ತು ಕಡಿಮೆ ಮಾಡಲು ಬಯಸುವ ಆಗಿರಬಹುದು. ಎಬಿಎ ನಲ್ಲಿ ಎಬಿಸಿ ಎಂದರೇನು? ಎಬಿಸಿ ಎಂದರೆ ಪೂರ್ವ, ನಡವಳಿಕೆ, ಪರಿಣಾಮ. ಇದು ನಡವಳಿಕೆಯನ್ನು ವಿಶ್ಲೇಷಿಸಲು ಬಳಸುವ ಒಂದು ಚೌಕಟ್ಟಾಗಿದೆ. ಒಂದು ಘಟನೆಯ ಮೊದಲು, ಸಮಯದಲ್ಲಿನ ಮತ್ತು ನಂತರ ಏನಾಗುತ್ತದೆ. ಎ ಮುನ್ಸೂಚನೆಯಾಗಿದೆ_ನಡವಳಿಕೆಗಳು ಮೊದಲು ಸುಮಾರು ಮೂರು ನಿಮಿಷಗಳು ತಕ್ಷಣ ಸಂಭವಿಸುವ ಏನಾದರೂ, ಏನಾದರೂ ಮಾಡಲು ಕೇಳಲಾಗಿದೆ. ಏನೋ ಬೇಕಿತ್ತು. ಯಾರನ್ನಾದರೂ ಬೇಕಾಗಿದ್ದಾರೆ. ಗೊತ್ತಿಲ್ಲ ಅವನು ಒಬ್ಬಂಟಿಯಾಗಿದ್ದ ನೀವು ಅವನನ್ನು ನೋಡಲಿಲ್ಲ. ಅದು "ಅನಿರೀಕ್ಷಿತ" ಎಂದು ತೋರುತ್ತಿತ್ತು. ಸ್ಥಳ? ದಿನದ ಸಮಯ? ಯಾರಿದ್ದರು? ಬಿ ಎಂದರೆ ನಡವಳಿಕೆ–ಹೊಡೆಯುವುದು, ಹೊದೆಯುವುದು, ಉಗುಳುವುದು, ನಿರಾಕರಿಸುವುದು, ಏನನ್ನಾದರೂ ಕೇಳುವುದು, ಏನು? ಯಾರು? ಬಹಳ ನಿರ್ದಿಷ್ಟವಾಗಿದಿರಿ. ನಡವಳಿಕೆಯನ್ನು ಕೋಪದ್ರಿಕ ಅನುಚಿತ" ಕೆಟ್ಟದಾಗಿ ವರ್ತಿಸುವುದು" ಅದು ಯಾವಾಗ ಸಂಭವಿಸುತ್ತದೆ. ಸಿ ಎಂದರೆ ಪರಿಣಾಮ– ಆ ವರ್ತನೆ ಸಂಭವಿಸಿದ ತಕ್ಷಣ ಏನಾಯಿತು? ಎಲ್ಲರೂ ಹೇಗೆ ಪ್ರತಿಕ್ರಿಯಿಸಿದರು? ಟೈಮ್ ಔಟ್ ಏನೂ ಇಲ್ಲ. "ಇಲ್ಲ"ಎಂದು ಹೇಳದೆ ಮತ್ತು ಗದರಿಸಿದೆ ಅಥವಾ ಉಪನ್ಯಾಸ ನೀಡಿದೆ. ಅಲುಗಾಡಿದೆ ಅಥವಾ ಸಾಂತ್ವನ ನೀಡಿದೆ. ಇಷ್ಟವಾದ ವಸ್ತುವನ್ನು ತೆಗೆದುಕೊಂಡು ಹೋಗಿದೆ. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳ ಪಾಲಕರು ಇದರಲ್ಲಿ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶೀಘ್ರ ಪತ್ತೆ ಹಚ್ಚೋಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ಸಂಪೂರ್ಣ ಮಾಹಿತಿಯನ್ನು ನೀಡಿದರು.

ವರದಿಗಾರರು: ಶ್ರೀಮಾನ ಸೂರ್ಯಕಾಂತ್

## "ಪೋಷಕರ ಸಭೆ ಮತ್ತು ಪೋಷಕರ ಸಂಘ ರಚನೆ"



09 ಜನವರಿ 2026ರಂದು ಹುಮ್ನಾಬಾದ್ ತಾಲೂಕಿನ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ, ಪೋಷಕರ ಸಭೆ ಮತ್ತು ಪೋಷಕರ ಸಂಘ ರಚನೆ ಮಾಡಲಾಯಿತು. ಸಂಘಸಭೆ ರಚನೆ ಮಾಡುವುದರಿಂದ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಜೊತೆಗೆ ಮಕ್ಕಳಿಗೆ ವಿವಿಧ



ಇಲಾಖೆಗಳಿಂದ ಸಿಗುವಂತಹ ಸಾಧನೆ ಮತ್ತು ಸಲಕರಣೆಗಳು ಪಡೆದುಕೊಳ್ಳುವ ಸಹಕಾರಿಯಾಗಿದೆ. ಮಕ್ಕಳ ಸಂಘದಲ್ಲಿ ಹಣ ಹೂಡಿಕೆ ಮಾಡುವುದರಿಂದ ಸಂಘಟನೆ ಬಲವರ್ಧನೆಗೊಳ್ಳುತ್ತದೆ. ಮಕ್ಕಳ ಸರ್ವಾಂಗಣ ವಿಕಾಸಕ್ಕೆ ಸಹಾಯವಾಗುತ್ತದೆ. ಮಕ್ಕಳ ಈ ಸಂಘ ಮಾಡುವುದರಿಂದ ಹಣ ಸಂಗ್ರಹಣೆ ಮಾಡಿ ಉಳಿತಾಯ ಮಾಡುವುದರಿಂದ ಬ್ಯಾಂಕಿನಲ್ಲಿ ಜಮ ಇರುತ್ತದೆಂದು ಮಾಹಿತಿ ನೀಡಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಪುರಸಭೆ ಸಂಯೋಜಕರು ಶ್ರೀಮತಿ ವಿಜಯಲಕ್ಷ್ಮಿ ರವರು ಭಾಗವಹಿಸಿದರು. ಮಕ್ಕಳ ಪೋಷಕರಿಗೆ ಸಂಘದಿಂದ ಏನೆಲ್ಲಾ ಪ್ರಯೋಜನಗಳಾಗುತ್ತದೆ ಮಕ್ಕಳಿಗೆ ಬಹಳ ಅನುಕೂಲವಾಗುತ್ತದೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

ವರದಿಗಾರರು: ಶ್ರೀಮತಿ ಮಮತಾ

# "ನವಜೀವನ ಆರ್ಬಿಟ್ ಕಾರ್ಯಕ್ರಮ"

## "ನರೇಗಾ ಯೋಜನೆಯ ಕೂಲಿಕಾರ್ಮಿಕರಿಗೆ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ"



15 ಜನವರಿ 2026ರಂದು ಹುಮನಾಬಾದ್ ತಾಲೂಕಿನ ಸೇಡೋಳ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ನರೇಗಾ ಯೋಜನೆಯ ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥತೆ ಕುರಿತು ಸಮಾಜದಲ್ಲಿ ಇರುವ ಭಯ, ಮೂಢನಂಬಿಕೆ ಹಾಗೂ ತಪ್ಪು ಕಲ್ಪನೆಗಳನ್ನು ದೂರಮಾಡುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಆರ್ಬಿಟ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥತೆಗಳ ಲಕ್ಷಣಗಳು, ಕಾರಣಗಳು ಹಾಗೂ ಚಿಕಿತ್ಸೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥತೆಯು ಯಾವುದೇ ವ್ಯಕ್ತಿಗೆ ಸಂಭವಿಸಬಹುದಾದ ಸಾಮಾನ್ಯ ಆರೋಗ್ಯ ಸಮಸ್ಯೆಯಾಗಿದ್ದು, ಸಮಯಕ್ಕೆ ಸರಿಯಾದ ಚಿಕಿತ್ಸೆ ಮತ್ತು ಕುಟುಂಬದ ಬೆಂಬಲ ದೊರೆತರೆ ಸಂಪೂರ್ಣ ಗುಣಮುಖರಾಗಲು ಸಾಧ್ಯ ಎಂಬುದನ್ನು ವಿವರಿಸಲಾಯಿತು. ಜೊತೆಗೆ ಮಾನಸಿಕ ಅಸ್ವಸ್ಥರನ್ನು ತಿರಸ್ಕರಿಸದೆ ಪ್ರೀತಿ, ಸಹಾನುಭೂತಿ ಮತ್ತು ಗೌರವದಿಂದ ನೋಡಿಕೊಳ್ಳಬೇಕೆಂಬ ಸಂದೇಶವನ್ನು ನೀಡಲಾಯಿತು. ಒಟ್ಟು 14 ಜನ ನರೇಗಾ ಯೋಜನೆಯ ಕೂಲಿಕಾರ್ಮಿಕರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

ವರದಿಗಾರರು: ಶ್ರೀಮತಿ ಪೂಜಾ

## "ಸೀತಾಳಗೇರಾ ಗ್ರಾಮದ ನರೇಗಾ ಕುಲಿ ಕಾರ್ಮಿಕರಿಗೆ ಮಾನಸಿಕ ರೋಗದ ಜಾಗೃತಿ"



05 ಜನವರಿ 2026ರಂದು ಹುಮ್ನಾಬಾದ್ ತಾಲೂಕಿನ ಸೀತಾಳಗೇರಾ ಗ್ರಾಮದ ನರೇಗಾ ಕುಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ನವಜೀವನ ಕಾರ್ಯಕ್ರಮದ ವತಿಯಿಂದ ನರೇಗಾ ಕೂಲಿ ಕಾರ್ಮಿಕರಿಗೆ ಮಾನಸಿಕ ರೋಗದ ಜಾಗೃತಿ ಮೂಡಿಸಲಾಯಿತು. ಸಮುದಾಯಗಳಲ್ಲಿ ಖಿನ್ನತೆ ಲಕ್ಷಣಗಳು ಕಂಡುಬಂದರೆ ತಕ್ಷಣವೇ ಸರ್ಕಾರಿ ಆಸ್ಪತ್ರೆಯಲ್ಲಿರುವ ಮನೋವೈದ್ಯರನ್ನ ಸಂಪರ್ಕಿಸಬೇಕು. ಮತ್ತು ಆಪ್ತ ಸಮಾಲೋಚನೆಗೆ ಒಳಪಡಬೇಕು ಎಂದು ತಿಳಿಸಲಾಯಿತು. ತಕ್ಷಣವೇ ಚಿಕಿತ್ಸೆ ಪಡೆಯುವುದರಿಂದ ಮಾನಸಿಕ ಲಕ್ಷಣಗಳನ್ನು ತಡೆಗಟ್ಟಬಹುದು ಎಂದು ಅರಿವು ಮೂಡಿಸಲಾಯಿತು.

ವರದಿಗಾರರು: ಶ್ರೀಮಾನ ನೀಲಕಂಠ

# "ನವಜೀವನ (ಎಲ್. ಎಲ್. ಎಲ್. ಎಫ್) ಕಾರ್ಯಕ್ರಮ"

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



01 ಜನವರಿ 2026ರಂದು ಔರಾದ್ ತಾಲೂಕಿನ ಲಷ್ಕರ್ ನಾಯಕ್ ತಾಂಡದಲ್ಲಿ ಸಮುದಾಯದ ಜನರಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸುನಿಲ್ ರವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಸಮಾಜದಲ್ಲಿ ಮಾನಸಿಕ ಅಸ್ವಸ್ಥತೆಯ ಕುರಿತು ಇರುವ ಮೂಢ ನಂಬಿಕೆ ಮತ್ತು ತಪ್ಪು ಕಲ್ಪನೆಯನ್ನು ಜಾಗೃತಿ ನೀಡುವ ಮೂಲಕ ಅರಿವು ಮೂಡಿಸಿದರು. ಅದೇ ರೀತಿ, ಮಾನಸಿಕ ಅಸ್ವಸ್ಥರಿಗೆ ಕುಟುಂಬದ ಬೆಂಬಲ, ಸಮಾಜದ ಸಹಕಾರ ಮತ್ತು ಸಮಯಕ್ಕೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಎಷ್ಟು ಅಗತ್ಯವೋ ಎಂಬುದನ್ನು ವಿವರಿಸಲಾಯಿತು. ಮಾನಸಿಕ ಅಸ್ವಸ್ಥರನ್ನು ನಿರ್ಲಕ್ಷ್ಯ ಮಾಡುವುದಕ್ಕಿಂತ ಪ್ರೀತಿಯಿಂದ, ಸಹಾನುಭೂತಿಯಿಂದ ನೋಡಬೇಕು ಎಂಬ ಸಂದೇಶವನ್ನು ಕಾರ್ಯಕ್ರಮದ ಮೂಲಕ ಜನರಿಗೆ ತಲುಪಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 10 ಜನ ಭಾಗವಹಿಸಿದರು. ವರದಿಗಾರರು: ಕುಮಾರ್ ಸುನೀಲ್

## "ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮ"



02 ಜನವರಿ 2026ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್. ಎಲ್. ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತ ಅವರು ಮಾತನಾಡಿದರು. ಆರ್ಬಿಟ್ ಸಂಸ್ಥೆ ಒಂದು ಸಮಾಜ ಸೇವಾ ಸಂಸ್ಥೆಯಾಗಿದ್ದು, ಅಂಜಿಗೆ ತಳ್ಳಲ್ಪಟ್ಟ ವ್ಯಕ್ತಿಯನ್ನು ಶೀಘ್ರದಲ್ಲಿ ಪತ್ತೆ ಹಚ್ಚಿ ಅವರಿಗೆ ಸೂಕ್ತವಾದ ಚಿಕಿತ್ಸೆಯನ್ನು ಮತ್ತು ಪ್ರತಿ ತಿಂಗಳು ಅವರ ಮನೆಗೆ ಹೋಗಿ ಮಾತ್ರೆಗಳನ್ನು ತೆಗೆದುಕೊಳ್ಳು ವಿಧಾನವನ್ನು ಹಾಗೂ ಮಾತ್ರೆಗಳನ್ನು ಪರಿಶೀಲಿಸಿ, ಅವರ ಕುಟುಂಬಸ್ಥರೊಂದಿಗೆ ಸಂವಾದಿಸಿ ಅವರಿಗೆ ಚೇತರಿಸಿಕೊಳ್ಳುವ ದಾರಿಯನ್ನು ಕಂಡುಕೊಡುವಲ್ಲಿ ಸೇವೆ ಸಲ್ಲಿಸುತ್ತೇವೆ. ಇದು ಅಲ್ಲದೆ ನಾವು ಅವರಿಗೆ ಯುಡಿಐಡಿ ಕಾರ್ಡ್ ಸಹ ಮಾಡಿಸಿ ಉತ್ತಮ ಜೀವನ ಕಲ್ಪಿಸಲು ಪ್ರಯತ್ನಿಸುತ್ತವೇ ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 56 ಜನ ಮಕ್ಕಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ವರದಿಗಾರರು: ಶ್ರೀಮತಿ ಸುಜಾತಾ

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"




05 ಜನವರಿ 2026ರಂದು ಬಸವಕಲ್ಯಾಣ ತಾಲೂಕಿನ ಮಂಟಾಳ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಒಂದು ಜಾಗೃತಿ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿ, ಮಾನಸಿಕ ಅಸ್ವಸ್ಥತೆ ಕುರಿತು, ಅದರ ಲಕ್ಷಣಗಳ ಬಗ್ಗೆ ತಿಳಿಸಲಾಯಿತು. ಮಾನಸಿಕ ಕಾಯಿಲೆ ಬಗ್ಗೆ ಜನರಲ್ಲಿ ಇರುವ ತಪ್ಪು ನಂಬಿಕೆಗಳನ್ನು ಹೋಗಲಾಡಿಸುವ ವಿಧಾನ ಗಳ ಕುರಿತು ಮಾಹಿತಿ ನೀಡಲಾಯಿತು ಮಾನಸಿಕ ಕಾಯಿಲೆ ಹೊಂದಿದ ವ್ಯಕ್ತಿಗಳು ಯಾರಾದರೂ ಕಂಡುಬಂದರೆ ಅಂಗನವಾಡಿ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರಿಗೆ ತಿಳಿಸುವುದ ಉತ್ತಮ ವೆಂದು ಹಾಗೂ ಅಂತಹ ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಅವರನ್ನು ಚಿಕಿತ್ಸೆಗೆ ಒಳಪಡಿಸಿ ಅವರೆಲ್ಲರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು ಆರ್ಬಿಟ್ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ ಮಾನಸಿಕ ಅಸ್ವಸ್ಥರನ್ನು ಗುಣಮುಖರಾಗಿಸಿ ನವ ಸಮಾಜವನ್ನು ನಿರ್ಮಿಸುವ ಕರೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯ ಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 50 ಜನ ಮಕ್ಕಳು ಮತ್ತು ಶಿಕ್ಷಕರು ಭಾಗವಹಿಸಿದ್ದರು. ವರದಿಗಾರರು: ಶ್ರೀಮತಿ ಅನುರಾಧಾ

## "ಬಸವಕಲ್ಯಾಣ ತಾಲೂಕ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರೋಗ್ಯ ಶಿಬಿರ"

27 ಜನವರಿ 2026ರಂದು ಬಸವಕಲ್ಯಾಣ ತಾಲೂಕ ಸಾರ್ವಜನಿಕ ಆಸ್ಪತ್ರೆಯಲ್ಲಿ, ಆರ್ಬಿಟ್ ಸಂಸ್ಥೆಯ ನವಜೀವನ ಲೀವ್, ಲವ್, ಲಾಫ್ ಕಾರ್ಯಕ್ರಮದ ಸಯುಕ್ತಾಶ್ರಯದಲ್ಲಿ, ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ಆಯೋಜಿಸಲಾಗಿ, ಮನೋವೈದ್ಯರಾದ ಡಾ. ರಿತೇಶ್ ರವರಿಂದ ಶಿಬಿರದಲ್ಲಿ ಹಳೆ 59 ಮಾನಸಿಕ ಅಸ್ವಸ್ಥರನ್ನು ತಪಾಸಣೆಗೆ ಮತ್ತು ಹೊಸ 05 ಫಲಾನುಭವಿಗಳಿಗೆ ಸೂಕ್ತವಾದ ಮಾತ್ರೆಗಳನ್ನು ಒದಗಿಸಿಕೊಡುವಲ್ಲಿ ಸಂಸ್ಥೆಯ ಕಾರ್ಯಕರ್ತರು ಮುಂದಾದರು.



ವರದಿಗಾರರು: ಕುಮಾರ್ ಆಕಾಶ್

## “ಗಾದಗಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆ”



12 ಜನವರಿ 2026ರಂದು ಆರ್ಬಿಟ್ ಸಂಸ್ಥೆಯ ನವಜೀವನ ಲಿವ್. ಲವ್. ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರು ಬೀದರ್ ತಾಲೂಕಿನ ಗಾದಗಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಫಲಾನುಭವಿಗಳಿಗೆ ಆರೋಗ್ಯದ ಬಗ್ಗೆ ವಿಚಾರಿಸಿ ಆರೋಗ್ಯವೇ ಭಾಗ್ಯ ಎಂದು ಆರೋಗ್ಯದ ಮಹತ್ವದ ಬಗ್ಗೆ ತಿಳಿಸಲಾಯಿತು. ದೈಹಿಕವಾಗಿ ಮತ್ತು ಮಾನಸಿಕವಾಗಿ ಕುಗ್ಗಿದ್ದೀರಿ ಎಂಬುದನ್ನು ಮರೆತು ಸಮಾಜದಲ್ಲಿ ನಮಗೂ ಕೂಡ ಗೌರವವಿದೆ ಮತ್ತು ಎಲ್ಲರಕ್ಕಿಂತ ಹೆಚ್ಚಾಗಿ ಸೌಲಭ್ಯಗಳು ಇವೆ ಎಂದು ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ಫಲಾನುಭವಿಗಳಲ್ಲಿ ಧೈರ್ಯ ತುಂಬಿಸಲಾಯಿತು. ಸರ್ಕಾರದ ಸೌಲಭ್ಯಗಳು ಮತ್ತು ದಾಖಲತಿಗಳ ಪ್ರಾಮುಖ್ಯತೆ, ಯು. ಡಿ. ಐ. ಡಿ ಕಾರ್ಡ್ ಮತ್ತು ಮಾಶಾಸನ, ಗ್ರಾಮ ಪಂಚಾಯತ್‌ನ ಅಡಿಯಲ್ಲಿರುವ 5% ಪರ್ಸೆಂಟ್ ಅನುದಾನ. ಈ ರೀತಿ ಅನೇಕ ಸೌಲಭ್ಯಗಳ ಕುರಿತು ಮತ್ತು ಅದರ ಲಾಭಗಳ ಕುರಿತು ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 7 ಜನ ಭಾಗವಹಿಸಿದ್ದರು. ವರದಿಗಾರರು: ಶ್ರೀಮಾನ ಅರುಣ್

## “ಮಾನಸಿಕ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮ”



05 ಜನವರಿ 2026ರಂದು ಭಾಲ್ಕಿ ತಾಲ್ಲೂಕಿನ ಅತ್ತನೂರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಪೀಟರ್ ರವರು ಲೀವ್. ಲವ್. ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮನಸ್ಸಿನ ಸಮಸ್ಯೆಗಳ ಬಗ್ಗೆ ಸೂಕ್ತವಾಗಿ ಮಾತನಾಡುವ ಧೈರ್ಯ ನೀಡುವುದು. ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯ ಎಂದರೇನು? ಮತ್ತು ಅದು ಏಕೆ ಮುಖ್ಯ? ಎಂಬುದರ ಕುರಿತು ಮಾತನಾಡಿದರು. ಒತ್ತಡ, ಆತಂಕ, ಖಿನ್ನತೆ ಮುಂತಾದ ಸಮಸ್ಯೆಗಳ ಪರಿಚಯ ದಿನನಿತ್ಯದಲ್ಲಿ ಮನಸ್ಸನ್ನು ಆರೋಗ್ಯವಾಗಿಡುವ ಸರಳ ಮಾರ್ಗಗಳು, ಸಮಸ್ಯೆಗಳ ಸಹಾಯ ಪಡೆಯುವ ಅಗತ್ಯದ ಪ್ರಾಮುಖ್ಯತೆ ತಿಳಿಸಲಾಯಿತು. ದೇಹದ ಆರೋಗ್ಯಕ್ಕೆ ಹೇಗೆ ಗಮನ ಕೊಡುತ್ತೇವೋ, ಅದೇ ರೀತಿಯಲ್ಲಿ ಮನಸ್ಸಿನ ಆರೈಕೆಯೂ ಅಗತ್ಯ. ಸಮಸ್ಯೆಗಳನ್ನು ಮರೆಮಾಚುವುದಕ್ಕಿಂತ, ಮಾತನಾಡುವುದು ಪರಿಹಾರದ ಮೊದಲ ಹೆಜ್ಜೆ ಎಂಬ ಸಂದೇಶ ನೀಡಲಾಯಿತು. ಇದಕ್ಕೆ ಸೂಕ್ತ ಉಪಾಯಗಳಾಗಿ ಪ್ರತಿದಿನ ವ್ಯಾಯಾಮ ಮತ್ತು ಧ್ಯಾನ ಅಥವಾ ಪ್ರಾರ್ಥನೆ, ಸಾಕಷ್ಟು ನಿದ್ರೆ, ಕುಟುಂಬ ಹಾಗೂ ಸ್ನೇಹಿತರೊಂದಿಗೆ ಸಂವಾದವೆಂದು ಸೂಚಿಸಲಾಯಿತು. ಸಹಾಯಕ್ಕಾಗಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಹೆಲ್ಪ್‌ಲೈನ್ 14416 ಸಂಪರ್ಕಿಸುದಾಗಿ ತಿಳಿಸಿದರು. ಒಟ್ಟು 8 ಜನ ಭಾಗವಹಿಸಿದರು.

ವರದಿಗಾರರು: ಶ್ರೀಮಾನ ಪೀಟರ್

## “ಮಾನಸಿಕ ಅಸ್ವಸ್ಥತೆ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರಮಾಡಿ”



ಆರ್ಬಿಟ್ ಸಂಸ್ಥೆ ಮತ್ತು ಎಲ್. ಎಲ್. ಎಲ್. ಎಫ್ ಅವರ ಸಂಯುಕ್ತ ಆಶ್ರಯದಲ್ಲಿ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಮಾನಸಿಕ ಅಸ್ವಸ್ಥತೆ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರಮಾಡಿ, ಮಾನಸಿಕ ಆರೋಗ್ಯದ ಮಹತ್ವವನ್ನು ತಿಳಿಸುವುದಾಗಿತ್ತು. ಜಾಗೃತಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಯೋಹಾನ್ ರವರು ಭಾಗವಹಿಸಿ ಮಾತನಾಡಿದರು. ಅವರು ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಕಾರಣಗಳು, ಚಿಕಿತ್ಸೆ ಪಡೆಯುವ ಅಗತ್ಯತೆ, ಸಮಯಕ್ಕೆ ಸರಿಯಾದ ಸಹಾಯದ ಮಹತ್ವ ಹಾಗೂ ಸಮಾಜದ ಬೆಂಬಲದ ಪಾತ್ರ ಕುರಿತು ಸರಳವಾಗಿ ಮತ್ತು ಸ್ಪಷ್ಟವಾಗಿ ವಿವರಿಸಿದರು. ಮಾನಸಿಕ ಅಸ್ವಸ್ಥರು ಕೂಡ ಸೂಕ್ತ ಚಿಕಿತ್ಸೆ ಮತ್ತು ಕುಟುಂಬ–ಸಮಾಜದ ಸಹಕಾರದಿಂದ ಸಾಮಾನ್ಯ ಜೀವನ ನಡೆಸಬಹುದು ಎಂಬ ಸಂದೇಶವನ್ನು ಅವರು ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 18 ಜನರು ಭಾಗವಹಿಸಿದ್ದರು. ಭಾಗವಹಿಸಿದವರು ಆಸಕ್ತಿಯಿಂದ ಚರ್ಚೆಯಲ್ಲಿ ಪಾಲ್ಗೊಂಡು, ತಮ್ಮ ಸಂಶಯಗಳನ್ನು ಕೇಳಿ ಸ್ಪಷ್ಟತೆ ಪಡೆದುಕೊಂಡರು. ಕಾರ್ಯಕ್ರಮದ ಮೂಲಕ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಹೆಚ್ಚಿದ್ದು, ಅಗತ್ಯವಿದ್ದಲ್ಲಿ ಚಿಕಿತ್ಸೆ ಪಡೆಯಲು ಮುಂದಾಗುವ ಮನೋಭಾವ ಗ್ರಾಮಸ್ಥರಲ್ಲಿ ಮೂಡಿದೆ. ವರದಿಗಾರರು: ಕುಮಾರ್ ಯೋಹಾನ್

## “ಹೊನ್ನಳ್ಳಿ ಗ್ರಾಮದಲ್ಲಿ ಆರೈಕೆದಾರರ ಸಭೆ”



01 ಜನವರಿ 2026ರಂದು ಭಾಲ್ಕಿ ತಾಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಗೆ ಬಂದಂತ ಎಲ್ಲಾ ಆರೈಕೆದರರ ಆರೋಗ್ಯವನ್ನು ವಿಚಾರಿಸಿ, ಈ ಸಭೆಯ ಮುಖ್ಯ ಉದ್ದೇಶ, ತಮ್ಮ ಫಲಾನುಭವಿಗಳಿಗೆ ಸರಿಯಾದ ರೀತಿಯಿಂದ ನೋಡಿಕೊಳ್ಳುವುದು, ಪರಸ್ಪರ ಬೆಂಬಲ ನೀಡುವುದು, ಹಾಗೂ ಸಹಕಾರ ನೀಡುವುದು ಹಾಗೂ ತಮ್ಮ ಫಲಾನುಭವಿಗಳಿಗೆ ಪ್ರೀತಿಯಿಂದ ನೋಡಿಕೊಂಡರೆ ಅವರು ನಮ್ಮ ಹಾಗೆ ಸಮಾಜದಲ್ಲಿ ಜೀವಿಸಲು ಸಾಧ್ಯವಿದೆ ಎಂದು ತಿಳಿಸಲಾಯಿತು. ಈ ಒಂದು ಸಭೆಯಲ್ಲಿ 9 ಜನ ಸದಸ್ಯರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು. ವರದಿಗಾರರು: ಶ್ರೀಮತಿ ಕಲ್ಪನಾ

### “ತಾಲೂಕ ಆಸ್ಪತ್ರೆಯಲ್ಲಿ ಮನೋತಜ್ಞರಿಂದ ಉಚಿತವಾಗಿ ತಪಾಸಣೆ ಮತ್ತು ಚಿಕಿತ್ಸೆ”



02 ಜನವರಿ 2026ರಂದು ಬಸವಕಲ್ಯಾಣ ತಾಲೂಕಿನ ಧನೂರ (ಆರ್) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಪಾಲಕರಿಗೆ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್. ಎಲ್. ಎಲ್. ಎಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ, ಮಾನಸಿಕ ಆರೋಗ್ಯ ಕುರಿತು ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಆರ್ಬಿಟ್ ಸಂಸ್ಥೆ ಒಂದು ಸಮಾಜ ಸೇವಾ ಸಂಸ್ಥೆಯಾಗಿದ್ದು, ಸಮಾಜದ ಅಂಚಿಗೆ ತಳ್ಳಲ್ಪಟ್ಟ ವ್ಯಕ್ತಿಗಳ ಪರವಾಗಿ ಶ್ರಮಿಸುತ್ತಿದೆ. ಇತ್ತೀಚಿಗೆ ಮೂರು ವರ್ಷಗಳಿಂದ ಮಾನಸಿಕ ರೋಗಕ್ಕೆ ಒಳಗಾದ ವ್ಯಕ್ತಿಗಳನ್ನು ಗುರಿತಿಸಿ ಅವರನ್ನು ತಾಲೂಕ ಆಸ್ಪತ್ರೆಯಲ್ಲಿ ಮನೋತಜ್ಞರಿಂದ ಉಚಿತವಾಗಿ ತಪಾಸಣೆ ಮತ್ತು ಚಿಕಿತ್ಸೆಗೆ ಒಳಪಡಿಸಿ, ಪ್ರತಿ ತಿಂಗಳು ಮಾತ್ರೆಗಳನ್ನು ದೊರಕಿಸಿ ಕೊಡುವುದು ಮತ್ತು ಅದರೊಂದಿಗೆ ಆಪ್ತ ಸಮಾಲೋಚನೆ ನಡೆಸಿ, ಸಾಮಾಜಿಕ ಭದ್ರತೆ ಯೋಜನೆಗಳು ಮಾಡಿಸಿ ಕೊಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಾನಸಿಕ ಅಸ್ವಸ್ಥರಿಗೆ ಇರುವ ಕಳಂಕವನ್ನು ಹೋಗಲಾಡಿಸುವುದು ಮಾತ್ರವಲ್ಲದೆ. ಈ ಕಾಯಿಲೆಯ ಬಗ್ಗೆ ಜನರಲ್ಲಿರುವ ಮೂಢನಂಬಿಕೆ ಮತ್ತು ತಪ್ಪು ಕಲ್ಪನೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಹಾಗಾಗಿ ಇದರ ಕುರಿತು ಆರ್ಬಿಟ್ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ 9066632471 ಕರೆಮಾಡಿ ಮಾಹಿತಿ ನೀಡಿದರೇ ಸಮಯದ ಬೆಳವಣಿಗೆಗೆ ಸಹಕಾರಿಯಾಗುವುದು ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 46 ಜನರು ಭಾಗವಹಿಸಿದ್ದರು. ವರದಿಗಾರರು: ಶ್ರೀಮಾನ ವಿಜಯಕುಮರ

### “ವಿಶೇಷ ಚೇತನರ ಸಭೆ ಸರ್ಕಾರದ 5% ಸೌಲಭ್ಯಗಳ ಕುರಿತು ಮಾಹಿತಿ”



12 ಜನವರಿ 2026ರಂದು ಬೀದರ್ ತಾಲೂಕಿನ ಕಂಗಟಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲೀವ್ ಲವ್ ಲಾಫ್ ಫೌಂಡೇಶನ್ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಹಾಗೂ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ವಿಶೇಷ ಚೇತನರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಗೆ ಬಂದವರ ಆರೋಗ್ಯವನ್ನು ವಿಚಾರಿಸಿ ಅವರಿಗೆ ತಮ್ಮ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು. ಸರ್ಕಾರದಿಂದ ಸಿಗುವಂತಹ 5% ಪ್ರತಿಶತ ಸೌಲಭ್ಯಗಳ ಕುರಿತು. ಪ್ರತಿಯೊಬ್ಬರೂ ಯುಡಿಐಡಿ ಕಾರ್ಡ್, ಮಾಸಿಕ ಪಿಂಚಣಿ, ವೃದ್ಯಾಪ ವೇತನ ಸೌಲಭ್ಯಗಳನ್ನು ಉಚಿತವಾಗಿ ಪಡೆದುಕೊಳ್ಳಬೇಕು ಹಾಗೆಯೇ ಸರ್ಕಾರದಿಂದ ತಮ್ಮೆಲ್ಲರಿಗೂ ಸಿಗುವಂತ ಎಲ್ಲ ಸೌಲಭ್ಯಗಳನ್ನು ತಾವುಗಳು ಪಡೆದುಕೊಳ್ಳಬೇಕೆಂಬುದಾಗಿ ಈ ಒಂದು ಸಭೆಯಲ್ಲಿ ತಿಳಿಸಲಾಯಿತು. ಈ ಒಂದು ವಿಶೇಷ ಚೇತನರ ಸಭೆಯಲ್ಲಿ ಎಲ್ಲರೂ ಸೇರಿ ಒಟ್ಟು 07 ಜನರು ಭಾಗವಹಿಸಿದ್ದರು. ವರದಿಗಾರರು: ಶ್ರೀಮಾನ ನೋಹಾನ್

### “ಮಾನಸಿಕ ಅಸ್ವಸ್ಥರು ಹಾಗೂ ವಿಶೇಷ ಚೇತನರ ಸಂಘದ ಸಭೆ”



02 ಜನವರಿ 2026ರಂದು ಬೀದರ್ ತಾಲೂಕಿನ ಕೋಲಾರ (ಕೆ) ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಫೌಂಡೇಶನ್ ರವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರು ಹಾಗೂ ವಿಶೇಷ ಚೇತನರ ಸಂಘದ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಪ್ರೀತಿ ರವರು ಉಚಿತ ಮಾತ್ರೆಗಳ ಕುರಿತು, ಸರಕಾರಿ ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡುತ್ತಾ, ನಮಗೆ ಒದಗಬೇಕಾದ ಸರಕಾರಿ ಸೌಲಭ್ಯಗಳು ಉಚಿತವಾಗಿ ಪಡೆಯಬೇಕಾದರೆ. ಅದಕ್ಕೆ ನಾವು ನಮ್ಮ ಹಕ್ಕುಗಳ ಸಲುವಾಗಿ ಮಾತನಾಡುವುದನ್ನು ಕಲಿಯಬೇಕು ಅದರಂತೆ ನಾವು ವಿವಿಧ ಕ್ಷೇತ್ರಗಳಲ್ಲಿ ಹಾಗೂ ವಿವಿಧ ಇಲಾಖೆಗಳಿಗೆ ಭೇಟಿ ನೀಡಿ ಮಾಹಿತಿಗಳನ್ನು ಸಂಗ್ರಹಿಸಿಕೊಂಡಾಗ ಅವುಗಳನ್ನು ಪಡೆಯಲು ಸಹಕಾರವಾಗುತ್ತದೆ. ಆದುದರಿಂದ ಸಮಸ್ಯೆಗಳನ್ನು ಈ ಗುಂಪಿನಲ್ಲಿ ಚರ್ಚಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಲು ಸರಳವಾಗುತ್ತದೆ ಎಂದು ತಿಳಿಸಲಾಯಿತು. ಪ್ರತಿ ದಿನ ಯೋಗ ವ್ಯಾಯಾಮ ಹಾಗೂ ಸರಿಯಾದ ನಿದ್ರೆ ಮಾಡುವುದರಿಂದ ಮನುಷ್ಯನ ಆರೋಗ್ಯ ಸ್ಥಿತಿ ಹಾಗೂ ಮನಸ್ಥಿತಿ ತಮವಾಗಿರುತ್ತದೆ ಎಂದು ತಿಳಿಸುತ್ತಾ ಪ್ರತಿಯೊಬ್ಬರು ಬೆಳಿಗ್ಗೆ ವ್ಯಾಯಾಮ ಮಾಡುವಂತೆ ಸಲಹೆ ನೀಡಲಾಯಿತು. ವರದಿಗಾರರು: ಶ್ರೀಮತಿ ಪ್ರೀತಿ

### “ಕರ್ಕ್ಯಾಲ ಗ್ರಾಮದಲ್ಲಿ ಆರೈಕೆದಾರರ ಸಭೆ”



12 ಜನವರಿ 2026ರಂದು ಕಮಲನಗರ ತಾಲೂಕಿನ ಕರ್ಕ್ಯಾಲ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್. ಲವ್. ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಗೆ ಬಂದ ಎಲ್ಲಾ ಆರೈಕೆದಾರರಿಗೆ ಸ್ವಾಗತದ ಬಯಸಿ ದೇವರ ನಾಮ ಸ್ತುತಿಗೀತೆಯೊಂದಿಗೆ ಆರಂಭಿಸಲಾಯಿತು. ಈ ಸಭೆಯಲ್ಲಿ ಆರೈಕೆದಾರರ ಪಾತ್ರ ನಿರ್ವಹನೆಗೆ ಅವರಿಗೆ ಅಭಿನಂದಿಸುತ್ತ ಅವರ ಮನದಾಳದ ಭಾವನೆಗಳನ್ನು ಹಂಚಿಕೊಳ್ಳಲು ಸಮಯದ ಅವಕಾಶ ನೀಡಲಾಯಿತು. ನಂತರ ಅವರ ಆರೋಗ್ಯ ಸುಧಾರಣೆಯ ಕುರಿತು ಚರ್ಚಿಸಲಾಯಿತು. ಅವರಿಗೆ ದೊರಕಲಿಲ್ಲವಾದ ಮಾತ್ರೆಗಳಿಗೆ ವಕಾಲಾತು ಮಾಡಲು ಕೈ ಜೋಡಿಸಲು ಕರೆ ನೀಡಲಾಯಿತು. ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯಲ್ಲಿ ಒಟ್ಟು 8 ಆರೈಕೆದಾರರು ಭಾಗವಹಿಸಿದರು. ವರದಿಗಾರರು: ಶ್ರೀಮತಿ ಸಂಗೀತಾ

## “ಇಸ್ಲಾಂಪುರ್ ಗ್ರಾಮದಲ್ಲಿ ವಿಶೇಷ ಚೇತನರ ಸಭೆ”



16 ಜನವರಿ 2026ರಂದು ಬೀದರ್ ತಾಲೂಕಿನ ಇಸ್ಲಾಂಪುರ್ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಗೆ ಬಂದ ಎಲ್ಲಾ ಫಲನುಭವಿಗಳ ಆರೋಗ್ಯ ಕ್ಷೇಮವನ್ನು ವಿಚಾರಿಸಲಾಯಿತು. ಈ ಸಭೆಯನ್ನು ಪ್ರಾರ್ಥನೆಯೊಂದಿಗೆ ಆರಂಭಿಸಿ ಸಭೆಯ ಮುಖ್ಯ ಉದ್ದೇಶವನ್ನು ತಿಳಿಸಲಾಯಿತು. ಒಗ್ಗಟ್ಟಿನಿಂದ ಮಾಡಬಹುದಾದ ಹಾಗೂ ಪಡೆದುಕೊಳ್ಳಬಹುದಾದ ಅನೇಕ ವಿಷಯಗಳ ಕುರಿತು ಚರ್ಚಿಸಲಾಗುಯಿತು. ಪರಸ್ಪರ ಬೆಂಬಲ, ಅನುಭವಗಳ ಹಂಚಿಕೆ, ನಿರಂತರ ಸಭೆಗಳಿಂದ ಆಗುವ ಕಾರ್ಯಸಾಧನೆಯ ಮಾಹಿತಿ ನೀಡಲಾಯಿತು. ಇದರೊಂದಿಗೆ ಇತ್ತೀಚಿನ ಸವಾಲುಗಳು ಮತ್ತು ಯಶಸ್ಸುಗಳು, ಸ್ವ ಆರೋಗ್ಯದ ಪ್ರಾಮುಖ್ಯತೆ, ಲಭ್ಯ ಪಡಿಸಿಕೊಳ್ಳಲಾಗಿರುವ ಸರ್ಕಾರದ ಯೋಜನೆಗಳು, ಗ್ರಾಮ ಪಂಚಾಯತ್‌ನಲ್ಲಿ ವಿಶೇಷ ಚೇತನರಿಗೆ ಮಿಸಲಿಟ್ಟ ಶೇ 5% ಅನುದಾನ, ವಕಲತ್ತು ಮತ್ತು ಲಾಬಿ, ಕೌಶಲ್ಯ ತರಬೇತಿ ಬಗ್ಗೆ ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 06 ಫಲನುಭವಿಗಳು ಭಾಗವಹಿಸಿದರು. ವರದಿಗಾರರು: ಶ್ರೀಮಾನ ಆನಂದ್

## “ಮಾನಸಿಕ ಅಸ್ವಸ್ಥರಿಗೆ ಸೈಕೋ ಸೋಶಿಯಲ್ ಎಜುಕೇಶನ್ ತರಬೇತಿ”



06 ಜನವರಿ 2026ರಂದು ಬಸವಕಲ್ಯಾಣ ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಗೆ ಸೈಕೋ ಸೋಶಿಯಲ್ ಎಜುಕೇಶನ್ ತರಬೇತಿ ನೀಡಲಾಯಿತು. ಈ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದಂತಹ ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿರವರು ಮಾನಸಿಕ, ಸಾಮಾಜಿಕ ಶಿಕ್ಷಣ ತರಬೇತಿ ಎಂದರೆ ವ್ಯಕ್ತಿಯ ಮಾನಸಿಕ ಆರೋಗ್ಯ, ಭಾವನಾತ್ಮಕ ಸ್ಥಿತಿ, ಸಾಮಾಜಿಕ ಸಂಬಂಧಗಳು ಮತ್ತು ದೈನಂದಿನ ಜೀವನ ಕೌಶಲ್ಯಗಳನ್ನು ಉತ್ತಮಗೊಳಿಸಲು ನೀಡುವ ಮಾರ್ಗದರ್ಶನಾತ್ಮಕ ತರಬೇತಿ ಎನ್ನುತ್ತಾ. ಈ ತರಬೇತಿಯ ಮುಖ್ಯ ಉದ್ದೇಶ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಹೆಚ್ಚಿಸುವುದು, ಮಾನಸಿಕ ಸಮಸ್ಯೆಗಳ ಬಗ್ಗೆ ತಪ್ಪು ನಂಬಿಕೆಗಳನ್ನು ಕಡಿಮೆ ಮಾಡುವುದು, ವ್ಯಕ್ತಿ ಮತ್ತು ಕುಟುಂಬಕ್ಕೆ ಸಮಸ್ಯೆಗಳನ್ನು ಎದುರಿಸುವ ಕೌಶಲ್ಯಗಳನ್ನು ಕಲಿಸುವುದು, ಸಮಾಜದಲ್ಲಿ ಸ್ವೀಕಾರ ಮತ್ತು ಬೆಂಬಲವನ್ನು ಉತ್ತೇಜಿಸುವುದು ಎಂದು ತಿಳಿಸಲಾಯಿತು. ಈ ತರಬೇತಿಯಲ್ಲಿ ಒತ್ತಡ, ಆತಂಕ, ಮನೋನೊಂದು, ಮನೋವೈಕಲ್ಯಗಳ ಮೂಲಭೂತ ಮಾಹಿತಿ, ಮಾನಸಿಕ ಅಸ್ವಸ್ಥತೆಯ ಪ್ರಾರಂಭಿಕ ಲಕ್ಷಣಗಳು, ಒತ್ತಡ ನಿರ್ವಹಣೆ, ವಿಶ್ರಾಂತಿ ವಿಧಾನಗಳು, ಧ್ಯಾನ, ಉಸಿರಾಟ ಅಭ್ಯಾಸ, ಭಾವನಾತ್ಮಕ ನಿಯಂತ್ರಣ, ಕೋಪ, ದುಃಖ, ಭಯ ಇತ್ಯಾದಿಗಳನ್ನು ಸಮರ್ಥವಾಗಿ ನಿಭಾಯಿಸುವ ಸಾಮಾಜಿಕ ಕೌಶಲ್ಯಗಳು, ಸಂವಹನ ಕೌಶಲ್ಯ, ಸಂಬಂಧಗಳನ್ನು ಬಲಪಡಿಸುವ ವಿಧಾನಗಳು, ಕುಟುಂಬದ ಪಾತ್ರ, ನಿಯಮಿತ ಚಿಕಿತ್ಸೆ ಪಾಲನೆಯ ಅಗತ್ಯ, ಆತ್ಮವಿಶ್ವಾಸದ ಕುರಿತು ತಿಳಿಸಲಾಯಿತು. ಕುಟುಂಬದ ಸದಸ್ಯರು, ಆರೈಕೆದಾರರು ಸಮುದಾಯದ ಸ್ವಯಂಸೇವಕರು ಆರೋಗ್ಯ ಕಾರ್ಯಕರ್ತರು ಸೇರಿ ಈ ತರಬೇತಿಯಲ್ಲಿ 16 ಜನರು ಭಾಗಿಯಾಗಿದ್ದರು. ವರದಿಗಾರರು: ಶ್ರೀಮತಿ ರುಪಾಲಿ

## “ಹುಲಗುತ್ತಿ ಗ್ರಾಮದಲ್ಲಿ ವೀರಭದ್ರೇಶ್ವರ ಆರೈಕೆದಾರರ ಸಭೆ”



ಬಸವಕಲ್ಯಾಣ ತಾಲೂಕಿನ ಹುಲಗುತ್ತಿ ಗ್ರಾಮದಲ್ಲಿ ವೀರಭದ್ರೇಶ್ವರ ಆರೈಕೆದಾರರ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಫಲಾನುಭವಿಗಳಿಗೆ ಔಷಧಿಯನ್ನು ನಿರಂತರವಾಗಿ, ಪ್ರತಿದಿನ, ವೈದ್ಯರ ಸಲಹೆಯಂತೆ ನೀಡುವುದರ ಮಹತ್ವವನ್ನು ಒತ್ತಿ ಹೇಳಲಾಯಿತು. ಔಷಧಿಯನ್ನು ತಪ್ಪಿಸಿದರೆ ಉಂಟಾಗುವ ತೊಂದರೆಗಳು ಹಾಗೂ ಎದುರಿಸಬೇಕಾದ ಸಮಸ್ಯೆಗಳಾದ, ನಿದ್ರೆ, ಆಹಾರ, ವರ್ತನೆಯಲ್ಲಿ ಅನಿಯಂತ್ರಿತ ಬದಲಾವಣೆ, ಚಿಕಿತ್ಸೆ ಪರಿಣಾಮ, ಫಲಾನುಭವಿಗಳ ಆರೋಗ್ಯದಲ್ಲಿ ಬರುವ ನಕಾರಾತ್ಮಕ ಬದಲಾವಣೆಗಳನ್ನು ಕುರಿತು ಚರ್ಚಿಸಲಾಯಿತು. ಯಾವುದೇ ಬದಲಾವಣೆ ಕಂಡುಬಂದರೂ ತಕ್ಷಣ ಆರೈಕೆ ಸಿಬ್ಬಂದಿಗೆ ಅಥವಾ ವೈದ್ಯರಿಗೆ ತಿಳಿಸುವುದು ಅಗತ್ಯ ಎಂದು ತಿಳಿಸಲಾಯಿತು. ಈ ಸಭೆಯಲ್ಲಿ 9 ಆರೈಕೆದಾರರು ಮತ್ತು ಮಾನಸಿಕ ಅಸ್ವಸ್ಥರು ಭಾಗಿಯಾಗಿದ್ದರು. ವರದಿಗಾರರು: ಶ್ರೀಮಾನ ಮಹಾದೇವ್

## “ಹತ್ಯಾಳ್ ಗ್ರಾಮದ ಆರೈಕೆದಾರರಿಗೆ ಆಪ್ತ ಸಮಾಲೋಚನೆ”



ಹತ್ಯಾಳ್ ಗ್ರಾಮದ ಬಸವಕಲ್ಯಾಣ ತಾಲೂಕದ ನಿವಾಸಿ ಹಾಗೂ ಫಲನುಭವಿಯ ಆರೈಕೆದಾರರಾದ ಮುದ್ರಿಕಾಬಾಯಿ ರವರಿಗೆ ಆಪ್ತ ಸಮಾಲೋಚನೆ ಮಾಡಲಾಗಿತು. ಮಾನಸಿಕ ಅಸ್ವಸ್ಥಗೊಂಡ ಮಗನ ಜೀವಮಾನದಲ್ಲಿ ಸುಧಾರಣೆ ಅಗಲಾರದೆಂಬ ದೃಢಸಂಕಲ್ಪ ಹೊಂದಿದ ತಾಯಿ ಈಗ ಆತನ ಆರೋಗ್ಯದಲ್ಲಿ ಸುಧಾರಣೆ ಯಾಗುವ ಆಶಾ ಕಿರಣವನ್ನು ಬೆಳೆಸಿ ಕೊಂಡಿರುವರು. ತಮ್ಮ ಈ ಕಠಿಣ ಸಮಯದಲ್ಲಿ ಆರ್ಬಿಟ್ ಸಂಸ್ಥೆಯವರು ನೀಡಿದ ಉತ್ತಮ ಸೇವೆ, ಮಾರ್ಗದರ್ಶನ ಮತ್ತು ಸಹಕಾರ ನಮಗೆ ಬಹಳ ಧೈರ್ಯ ಮತ್ತು ಆಶ್ವಾಸನೆ ನೀಡಿದೆ. ಆರ್ಬಿಟ್ ಸಿಬ್ಬಂದಿಯವರ ಚಿಕಿತ್ಸೆ, ಆಪ್ತ ಸಮಾಲೋಚನೆ, ಸಲಹೆ ಮತ್ತು ನಿರಂತರ ಸಂಪರ್ಕದ ಮೂಲಕ ತಮ್ಮ ಆರೋಗ್ಯದಲ್ಲಿ ಉತ್ತಮ ಬದಲಾವಣೆ ತರಲು ಸಹಾಯ ಮಾಡಿದ್ದಾರೆ. ಈ ಅಮೂಲ್ಯ ಸೇವೆಗಾಗಿ ಆರ್ಬಿಟ್ ಸಂಸ್ಥೆಗೆ ಹೃದಯಪೂರ್ವಕ ಧನ್ಯವಾದಗಳು. ಮುಂದೆಯೂ ಇಂತಹ ಮಾನವೀಯ ಸೇವೆಯನ್ನು ಮುಂದುವರಿಸಲಿ ಎಂದು ಹಾರೈಸಿದ್ದಾರೆ. ವರದಿಗಾರರು: ಶ್ರೀಮತಿ ರುಪಾಲಿ

## “ಮಾನಸಿಕ ಅಸ್ವಸ್ಥರಿಗೆ ಹಾಗೂ ಆರೈಕೆದಾರರಿಗೆ ಸೈಕೋ ಸೋಶಿಯಲ್ ಎಜುಕೇಶನ್ ಬಗ್ಗೆ ತರಬೇತಿ”



05 ಜನವರಿ 2026ರಂದು ಬೀದರ್ ಜಿಲ್ಲೆಯ ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಗೆ ಹಾಗೂ ಆರೈಕೆದಾರರಿಗೆ ಸೈಕೋ ಸೋಶಿಯಲ್ ಎಜುಕೇಶನ್ ಬಗ್ಗೆ ತರಬೇತಿ ನೀಡಲಾಯಿತು. ಈ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದಂತ ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿಯವರು ಈ ತರಬೇತಿ ಯನ್ನು ನಡೆಸಿಕೊಟ್ಟರು. ವ್ಯಕ್ತಿಗಳು, ಕುಟುಂಬದ ಸದಸ್ಯರು ಹಾಗೂ ಆರೈಕೆದಾರರಿಗೆ ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸಿ, ಮಾನಸಿಕ ಅಸ್ವಸ್ಥತೆಗಳ ಬಗ್ಗೆ ಸರಿಯಾದ ಮಾಹಿತಿ ನೀಡಿ ದಿನನಿತ್ಯದ ಜೀವನದಲ್ಲಿ ಎದುರಾಗುವ ಮಾನಸಿಕ, ಸಾಮಾಜಿಕ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯವನ್ನು ಬೆಳೆಸುವ ಚಟುವಟಿಕೆಗಳನ್ನು ಸೂಚಿಸಲಾಯಿತು. ಉತ್ತಮ ಮಾನಸಿಕ ಆರೋಗ್ಯ ಜೀವನದ ಗುಣಮಟ್ಟವನ್ನು ಹೇಗೆ ಹೆಚ್ಚಿಸುತ್ತದೆ ಎಂಬುದನ್ನು ವಿವರಿಸಿ ಖಿನ್ನತೆ, ಆತಂಕ, ಮನೋವಿಕೃತಿ ಒತ್ತಡ ಮುಂತಾದ ಸಾಮಾನ್ಯ ಮಾನಸಿಕ ಸಮಸ್ಯೆಗಳ ಲಕ್ಷಣಗಳು ಮತ್ತು ಕಾರಣಗಳ ಬಗ್ಗೆ ತಿಳಿಸಲಾಯಿತು. ಕುಟುಂಬದ ಒತ್ತಡ, ಆರ್ಥಿಕ ಸಮಸ್ಯೆಗಳು, ಸಾಮಾಜಿಕ ತಿರಸ್ಕಾರ, ಉದ್ಯೋಗ ಸಮಸ್ಯೆಗಳು ಇವು ಮಾನಸಿಕ ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಚರ್ಚಿಸಿ ಅದಕ್ಕೆ ಸೂಕ್ತವಾಗಿ ಧ್ಯಾನ, ಉಸಿರಾಟ, ವ್ಯಾಯಾಮ, ಯೋಗ, ಸಕಾರಾತ್ಮಕ ಚಿಂತನೆ ಮತ್ತು ಸಮಯ ನಿರ್ವಹಣೆಯಂತಹ ಸರಳ ವಿಧಾನಗಳನ್ನು ಪರಿಚಯಿಸಲಾಯಿತು. ವರದಿಗಾರರು: ಶ್ರೀಮತಿ ರುಪಾಲಿ

## “ಸಮುದಾಯ ಭವನದಲ್ಲಿ ಸಮುದಾಯದ ಜನರಿ ಗೆಸ್ಪರ್ಶ ಕ್ಯಾನ್ಸರ್ ಅರಿವಿನ ಕಾರ್ಯಕ್ರಮ”




03 ಜನವರಿ 2026ರಂದು ಬೀದರ್ ತಾಲೂಕಿನ ಚೋಂಡಿ ಗ್ರಾಮದ ಸಮುದಾಯ ಭವನದಲ್ಲಿ ಸಮುದಾಯದ ಜನರಿಗೆ ಆರ್ಬಿಟ್ ಸಂಸ್ಥೆ ಹಾಗೂ ಸ್ಪರ್ಶ ಕ್ಯಾನ್ಸರ್ ರವರ ಸಹಯೋಗದಲ್ಲಿ ಕ್ಯಾನ್ಸರ್ ಕುರಿತು ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಹರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಪ್ರೀತಿ ರವರು ಮಾತನಾಡುತ್ತಾ, ಕ್ಯಾನ್ಸರ್ ರೋಗವು ಒಂದು ಮಹಾಮಾರಿ ರೋಗವಾಗಿದ್ದು ಇದಕ್ಕೆ ಸಂಪೂರ್ಣವಾದ ಚಿಕಿತ್ಸೆಯು ಸರಿಯಾದ ಸಮಯದಲ್ಲಿ ಗುರುತಿಸಿದಾಗ ಮಾತ್ರ ಅದನ್ನು ಯಶಸ್ವಿಯಾಗಿ ಪಡೆಯಬಹುದಾಗಿದೆ. ಈ ಒಂದು ರೋಗವು ಮಹಿಳೆಯರಲ್ಲಿ ಪುರುಷರಲ್ಲಿ ಮಕ್ಕಳಲ್ಲಿ ಯಾವುದೇ ಭೇದವಿಲ್ಲದೆ ಬರಬಹುದು ಆದಕಾರಣ ಅತಿಯಾದ ದುಶ್ಚಟಗಳಾದ ಸಾರಾಯಿ, ಗುಟುಕ, ತಂಬಾಕು, ಇತ್ಯಾದಿ ನಶೆಯ ಪದಾರ್ಥಗಳು ಹಾಗೂ ಪ್ಲಾಸ್ಟಿಕ್ ಬಳಕೆಯಿಂದ ಬರುವಂತದ್ದಾಗಿದೆ. ಆದ್ದರಿಂದ ಇದನ್ನು ಲಕ್ಷದಲ್ಲಿಟ್ಟುಕೊಂಡು ತಮ್ಮ ಜೀವನವನ್ನು ಕಾಪಾಡಿಕೊಳ್ಳುವಂತೆ ಮಾರ್ಗದರ್ಶನವನ್ನು ನೀಡಲಾಯಿತು. ಮಕ್ಕಳನ್ನು ಹೆಚ್ಚಾಗಿ ಹೊರಗಿನ ತಿಂಡಿ ತಿನಿಸುಗಳನ್ನು ಹಾಗೂ ಅಂಗಡಿಗಳಲ್ಲಿ ಸಿಗುವಂತಹ ವಿವಿಧ ಬಗೆಯ ಚಿಪ್ಸ್, ಚಾಕ್ಲೇಟ್ ಹಾಗೂ ಪಾನಿಪೂರಿಗಳಂತಹ ತಿಂಡಿ ತಿನಿಸುಗಳನ್ನು ನಿಷೇಧಿಸಿ ಮನೆಯಲ್ಲಿಯೇ ಸುರಕ್ಷಿತ ರೀತಿಯಲ್ಲಿ ಮಾಡಿಕೊಡುವುದು. ಮಹಿಳೆಯರಲ್ಲಿ ಎದೆಯಲ್ಲಿ ನೋವು ಕೊಟ್ಟೆಯಲ್ಲಿ ನೋವು, ಹುಟ್ಟಿನ ಸಮಸ್ಯೆಗಳು ಕಂಡುಬಂದಲ್ಲಿ ಕೂಡಲೇ ವೈದ್ಯರ ಸಂಪರ್ಕಕ್ಕೆ ಬಂದು ತಮ್ಮ ಆರೋಗ್ಯದ ಕುರಿತು ಮಾಹಿತಿ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು. ವರದಿಗಾರರು: ಶ್ರೀಮತಿ ಪ್ರೀತಿ

## “ಮಾನಸಿಕ ಅಸ್ವಸ್ಥತೆಯಿಂದ ಚೇತರಿಸಿಕೊಂಡ ಫಲಾನುಭವಿಗಳಿಗಾಗಿ ಎರಡು ತಿಂಗಳ ಉಚಿತ ಹೊಲಿಗೆ ತರಬೇತಿ”




23 ಜನವರಿ 2026ರಂದು ಬಸವಕಲ್ಯಾಣ್ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲೀವ್, ಲವ್, ಲಾಫ್ ಕಾರ್ಯಕ್ರಮದ ಸ್ವ ಔಧ್ಯೂಗಿಕ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಇದರಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಚೇತರಿಸಿಕೊಂಡ ಫಲಾನುಭವಿಗಳಿಗಾಗಿ ಎರಡು ತಿಂಗಳ ಉಚಿತ ಹೊಲಿಗೆ ತರಬೇತಿಯನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನ ರವರು ಮಾತನಾಡಿದರು. ಈ ತರಬೇತಿಯನ್ನು ಸದುಪಯೋಗ ಪಡೆದುಕೊಂಡು ತಮ್ಮ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಎಲ್ಲ ಫಲಾನುಭವಿಗಳಿಗೆ ಕರೆನೀಡಿದರು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಮಾಜ ಕಾರ್ಯಕರ್ತರು ಮತ್ತು ಮುಖಂಡರು ಭಾಗವಹಿಸಿ ಆರ್ಬಿಟ್ ಸಮಾಜ ಸಂಸ್ಥೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 25 ಜನ ತರಬೇತಿದಾರರು ಭಾಗವಹಿಸಿದ್ದರು.

ವರದಿಗಾರರು: ಶ್ರೀಮತಿ ಸುಜಾತಾ

## "ಬೆನಕನಳ್ಳಿ ಗ್ರಾಮದಲ್ಲಿ ಶಾಂತಿ ಆರೈಕೆದಾರರ ಸಭೆ"



13 ಜನವರಿ 2026ರಂದು ಬೀದರ್ ತಾಲೂಕಿನ ಬೆನಕನಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್. ಲವ್. ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಶಾಂತಿ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಗೆ ಬಂದ ಎಲ್ಲಾ ಆರೈಕೆದಾರರ ಆರೋಗ್ಯವನ್ನು ವಿಚಾರಿಸಿ ಆರೈಕೆದಾರ ಸಭೆಯ ಮುಖ್ಯ ಉದ್ದೇಶ, ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವುದು, ಪರಸ್ಪರ ಬೆಂಬಲ ನೀಡುವುದು, ಸಹಕಾರ ನೀಡುವುದು ಮತ್ತು ಮಾನಸಿಕ ಅಸ್ವಸ್ಥರ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ವಿಷಯಗಳನ್ನು ಚರ್ಚಿಸುವುದು ಎಂದು ತಿಳಿಸಲಾಯಿತು. ಮಾತ್ರೆಗಳನ್ನು ಸರಿಯಾಗಿ ನೀಡುವುದು, ದಿನನಿತ್ಯದ ಕೆಲಸದಲ್ಲಿ ತೊಡಗಿಸಿಕೊಳ್ಳುವುದು, ಸಮುದಾಯದಲ್ಲಿ ಭಾಗವಹಿಸುವಿಕೆಯ ಕುರಿತು ಮಾಹಿತಿ ನೀಡಲಾಯಿತು. ಈ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯಲ್ಲಿ ಆಶಾ ಕಾರ್ಯಕರ್ತೆ ಸೇರಿ ಒಟ್ಟು 08 ಜನರು ಭಾಗವಹಿಸಿದರು.

ವರದಿಗಾರರು: ಶ್ರೀಮಾನ ನೋಹಾನ್

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಟೆಂಟ್‌ಹೌಸ್ ಅವರ್ನೆಸ್ ಕಾರ್ಯಕ್ರಮ"



16 ಜನವರಿ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪೇಮಜೀ ಫೌಂಡೇಶನ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಸಾವಳಗಿ ಗ್ರಾಮದ ಶಿವಲಿಂಗೇಶ್ವರ ದೇವಸ್ಥಾನದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಟೆಂಟ್ ಹೌಸ್ ಅವರ್ನೆಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 0 – 8 ವರ್ಷದೊಳಗಿನ, ಬೆಳವಣಿಗೆಯಲ್ಲಿ ಕೊಂಟಿತ ಹೊಂದಿದ ಮಕ್ಕಳು ಅಂದರೆ ಮಗು ಆರುತಿಂಗಳಿಗೆ ಕುಳಿತುಕೊಳ್ಳಬೇಕು ಒಂದು ವರ್ಷದಲ್ಲಿ ಮಗು ನಡೆಯಬೇಕು ಮೂರು ವರ್ಷದಲ್ಲಿ ಮಕ್ಕಳು ಚೆನ್ನಾಗಿ ಮಾತನಾಡಬೇಕು ಇವೆಲ್ಲವುಗಳನ್ನು ಮಗು ಮಾಡದಿದ್ದರೆ ನಮ್ಮ ಯೋಜನೆಯ ಕುರಿತು ಕರಪತ್ರ ನೀಡುವ ಮೂಲಕ ಅವರಿಗೆ ಮಾಹಿತಿ ನೀಡಲಾಯಿತು. ಒಟ್ಟಾರೆಯಾಗಿ ಲಕ್ಷ್ಮಿಯವರು ಕರಪತ್ರಗಳನ್ನು ಹಂಚುವುದರ ಮೂಲಕ ಇದರ ಸದುಪಯೋಗವನ್ನು 80 ಜನ ಗ್ರಾಮಸ್ಥರು ಪಡೆದುಕೊಂಡರು.

## "ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಾಗೃತಿ ಕರ್ಯಕ್ರಮ"



07 ಜನವರಿ 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪೇಮಜೀ ಫೌಂಡೇಶನ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಕಲ್ಬುರ್ಗಿ ತಾಲೂಕಿನ ಸಿಂದಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಾಗೃತಿ ಕರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 0–8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ಹೊಂದಿದ ಮಕ್ಕಳನ್ನು ಕಂಡುಹಿಡಿಯುವುದು ಅಂತಹ ಮಕ್ಕಳನ್ನು ಉತ್ತೇಜಕ ಚಟುವಟಿಕೆ ನೀಡುವುದರ ಮೂಲಕ ಬದಲಾವಣೆಯನ್ನು ತರುವುದು ಸಾವಳಗಿಯಲ್ಲಿ ಉಪಕೇಂದ್ರವಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದು ಕುಮಾರಿ ಲಕ್ಷ್ಮಿಅವರು ಉಪಾಧ್ಯಾಯರ ನೇತೃತ್ವದಲ್ಲಿ 60 ಜನ ವಿದ್ಯಾರ್ಥಿನಿಯರಿಗೆ ಮಾಹಿತಿ ತಿಳಿಸಿದರು.

## "ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಜಾಗೃತಿ ಕರ್ಯಕ್ರಮ"



05 ಜನವರಿ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪೇಮಜೀ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ ಬೆಳವಣಿಗೆ ಕುಂಠಿತವಿರುವ ಕುರಿತು ಕಲ್ಬುರ್ಗಿ ನಗರದ ಅಃ ಕಾಲೋನಿ ಏರಿಯಾದ ಎರಡನೆ ಅಂಗನವಾಡಿ ಕೇಂದ್ರದಲ್ಲಿ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆಯ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವೆ ಮಗುವಿನಲ್ಲಿ ಯಾವರೀತಿ ಬದಲಾವಣೆ ಆಗುತ್ತದೆ ಮತ್ತು ಸರ್ಕಾರದ ಸೌಲಭ್ಯಗಳು ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮಿ ಅವರು 11 ಜನ ಮಹಿಳೆಯರಿಗೆ ಮಾಹಿತಿ ನೀಡಿದರು. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಇದ್ದರು.

## “ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಜಾಗೃತಿ ಕರ್ಯಕ್ರಮ”



20 ಜನವರಿ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ಪ್ರೇಮ್ಜಿ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಬೆಳವಣಿಗೆ ಕುಂಠಿತವಿರುವ ಕುರಿತು ಕಲ್ಬುರ್ಗಿ ನಗರದ ಅಕ್ಕ ಮಹಾದೇವಿ ಕಾಲೋನಿ ಏರಿಯಾದ ಎರಡನೆ ಅಂಗನವಾಡಿ ಕೇಂದ್ರದಲ್ಲಿ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು ಮತು ವಿಶೇಷ ಚೈತನವಿರುವ ಮಕ್ಕಳ ವಿಧಗಳ ಕುರಿತು ಹಾಗೂ ಅವುಗಳ ಲಕ್ಷಣಗಳ ಕುರಿತು ವಿವರಿಸಿತಿಳಿಸಿ. ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆಯ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವೆ. ಹಂತಹಂತವಾಗಿ ಮಗುವಿನಲ್ಲಿ ಯಾವರೀತಿ ಬದಲಾವಣೆ ಆಗುತ್ತದೆ ಮತ್ತು ಸರ್ಕಾರದ ಸೌಲಭ್ಯಗಳು ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮಿ ಅವರು 8 ಜನ ಮಹಿಳೆಯರಿಗೆ ಮಾಹಿತಿ ನೀಡಿದರು. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಇದ್ದರು.

## “ಸರ್ಕಾರಿ ಸೌಲಭ್ಯಗಳ ಉರಿತು ಜಾಗೃತಿ”



ಕಲಬುರ್ಗಿ ನಗರಪ್ರದೇಶದಲ್ಲಿ ಬರುವಂತಹ ಯದುಲಾ ಕಾಲೋನಿ ಅಂಗನವಾಡಿ ಕೇಂದ್ರ 2 ರಲ್ಲಿ 10 ಜನವರಿ 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತೆಯಾದ ಅನಿತಾಅವರು ಈ ಸಭೆಯಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಇರುವ ಸರ್ಕಾರಿ ಸೌಲಭ್ಯಗಳನ್ನು ಯಾವರೀತಿ ಪಡೆದುಕೋಳಬೇಕು ಹಾಗೂ ನಿರಾಮಯ ಕಾರ್ಡ್ ಬಗ್ಗೆ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಕು. ಅನಿತಾ ಹಾಗೂ 10 ಜನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕ್ರಮ”



19 ಜನವರಿ 2026ರಂದು ಕಲಬುರಗಿ ಜಿಲ್ಲೆಯಲ್ಲಿ ಬರುವ ಶ್ರೀನಿವಾಸ ಸರಡಗಿ ಗ್ರಾಮದ ಸರ್ಕಾರಿ ಹಿರಿಯ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ದಾಕ್ಷಾಯಿಣಿ ಇವರು ಮಾಹಿತಿಯನ್ನು ನೀಡಿದರು. 0 ಯಿಂದ 6 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಯಾವರೀತಿಯಾಗಿ ಕಂಡುಬರುತ್ತದೆ ಎಂದರೆ 5 ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು ಒಂಬತ್ತು ತಿಂಗಳಿಗೆ ಮಗುವು ಚೆನ್ನಾಗಿ ಕುಳಿತುಕೋಳಬೇಕು ಒಂದು ವರ್ಷಕ್ಕೆ ಮಗುವು ಮಾತನಾಡಬೆಕು ಮೂರು ವರ್ಷಕ್ಕೆ ಮಗುವು ಎಲ್ಲಾರ ಜೋತೆಗೆ ಸಾಮಾಜಿಕವಾಗಿ ಬೇರೆಯಬೇಕು ಆರು ವರ್ಷಕ್ಕೆ ಮಗುವಿನ ಬೌದ್ಧಿಕ ಸಾಮರ್ಥ್ಯ ಹೊಂದಿರಬೇಕು ಒಂದುವೇಳೆ ಈ ಮೇಲಿನ ಅಂಶಗಳು ಮಗುವಿನಲ್ಲಿ ಕಂಡುಬಾರದೆ ಹೋದರೆ ಮಗುವೂ ಬೆಳವಣಿಗೆಯಲ್ಲಿ ಕುಂಠಿತಗೋಳ್ಳುತ್ತದೆ ಎಂಬುದು ತಿಳಿದುಕೋಳಬೇಕು ಬೆಳವಣಿಗೆಯಲ್ಲಿ ಮಕ್ಕಳಿಗೆ ಶೀಘ್ರವಾಗಿ ಪತ್ತೆಮಾಡುವ ಮೂಲಕ ಮಕ್ಕಳನ್ನೂ ನತೆಗೆ ತಕ್ಕಂತೆ ಉತ್ತೇಜಕ ಚಟುವಟಿಕೆಗಳನ್ನು ನೀಡುವಕಾರ್ಯ ಸೇವಾ ಸಂಗಮ ಸಂಸ್ಥೆಯ ಮಾಡುತ್ತಿದೆ. ಸರಿಯಾದ ಸಮಯಕ್ಕೆ ಉತ್ತೇಜಕ ಚಟುವಟಿಕೆ ದೊರೆಯದ ಸಂಧರ್ಭದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳು ವಿಕಲಚೇತನರಾಗುವ ಸಂಭವವಿರುತ್ತದೆ ಎಂದು ಹೇಳಿದರು.



ಕಲಬುರಗಿ ತಾಲ್ಲೂಕಿನಲ್ಲಿ ಬರುವ ಇಟಾಗ ಗ್ರಾಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪತ್ತೆಹಚ್ಚುವ ಕುರಿತು ಮತ್ತು ಅಂತಹ ಮಕ್ಕಳ ಬದಲಾವಣೆಗಾಗಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಉತ್ತೇಜಕ ಚಟುವಟಿಕೆಗಳನ್ನು ಒದಗಿಸುತ್ತಿರುವ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ 15 ಜನರು ಭಾಗವಹಿಸಿದರು.



ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದಲ್ಲಿ ಸ್ವಸಹಾಯ ಸಂಘದ ಮಹಿಳೆಯರಿಗೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪತ್ತೆಹಚ್ಚುವ ಕುರಿತು ಮತ್ತು ಅಂತಹ ಮಕ್ಕಳ ಬದಲಾವಣೆಗಾಗಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಉತ್ತೇಜಕ ಚಟುವಟಿಕೆಗಳನ್ನು ಒದಗಿಸುತ್ತಿರುವ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ 20 ಜನ ತಾಯಂದಿರು ಭಾಗವಹಿಸಿದರು.

## "ಸ್ವ ಉದ್ಯೋಗ ಹಿಟ್ಟಿನ ಗಿರಣಿ ಯಂತ್ರವನ್ನು ಖರೀದಿ"



19 ಜನವರಿ 2026ರಂದು ಕಲಬುರ್ಗಿ ಜಿಲ್ಲೆಯ ಬರುವ ಫರಹತಾಬಾದ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಮಹಿಳಾಸ ಬಲೀಕರಣ ಕಾರ್ಯಕ್ರಮದ ಸಂಯೋಜಕೀಯದ ಶ್ರೀಮತಿ ಇಂದುರವರು ನಂದಿಕೂ ಗ್ರಾಮಕ್ಕೆಹೋಗಿ ಕಾವೇರಿಅವರ ಮನೆ ಭೇಟಿಮಾಡಿ ಸಮೃದ್ಧಿಲೋನ ಪಡೆದುಕೊಂಡು ಸ್ವ ಉದ್ಯೋಗ ಮಾಡಲು ತಿಳಿಸಲಾಯಿತು. ಮಾಹಿತಿ ಪಡೆದುಕೊಂಡು ಕಾವೇರಿರವರು ಸಮೃದ್ಧಿಲೋನ್ 35000 ಸಾವಿರ ರೂಪಾಯಿ ಮತ್ತು ತಮ್ಮ ಕೈಯಿಂದ. 40,000 ಸಾವೀರ ರೂಪಾಯಿ ಜಮಮಾಡಿ ಹಿಟ್ಟಿನ ಗಿರಣಿ ಯಂತ್ರವನ್ನು ಖರೀದಿಮಾಡಿ ತಮ್ಮ ಮನೆಯಲ್ಲಿ ಸ್ವ ಉದ್ಯೋಗವನು ಮಾಡುತ್ತಿದ್ದಾರೆ. ಈ ಉದ್ಯೋಗ ಮಾಡುವುದರಿಂದ ನಮಗೆ ತುಂಬಾ ಸಹಾಯವಾಗುತ್ತದೆ ಎಂದು ಅಭಿವಕ್ತ ಪಡಿಸಲಾಯಿತು.

## "ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ"



09 ಜನವರಿ 2026ರಂದು ಕಲ್ಬುರ್ಗಿ ತಾಲೂಕಿನಲ್ಲಿ ಬರುವ ಖಣದಾಳ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಕ್ಯಾನ್ಸರ್ ಮಾಹಿತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಒಂದು ಕಾರ್ಯಕ್ರಮದಲ್ಲಿ ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಂದಿನಿರವರು ಕ್ಯಾನ್ಸರ್ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ತಂಬಾಕು, ಗುಟ್ಕಾ ಸೇವನೆಯಿಂದ ಕ್ಯಾನ್ಸರ್ ಬರುತ್ತದೆ ಮತ್ತು ಅದನ್ನು ಬಂದರೆ ಹೇಗೆ ತಡೆಯಬೇಕು ಅದರ ಲಕ್ಷಣಗಳು ಕುರಿತು ಒಟ್ಟು 20 ಜನ ಪುರುಷರಲ್ಲಿ ಅರಿವು ಮೂಡಿಸಿದರು.

## "ಸಾಯಂಕಾಲ ಕಲಿಕಾ ಕೇಂದ್ರದ ಕಾರ್ಯಕ್ರಮ"



ಸೇವಾ ಸಂಗಮ ಹಾಗೂ ಆರ್ಬಿಟ್ ಸಂಯುಕ್ತ ಆಶ್ರಯದಲ್ಲಿ 26 ಜನವರಿ 2026ರಂದು ಸಂಜೀವನಗರ ಮತ್ತು ನೆಹರುನಗರ ಕಲಿಕಾ ಕೇಂದ್ರದಲ್ಲಿ 77ನೇ ಗಣರಾಜ್ಯೋತ್ಸವ ಆಚರಣೆ ಮಾಡಲಾಯಿತು. ಗಣರಾಜ್ಯೋತ್ಸವದ ಮಹತ್ವದ ಕುರಿತು ಸವಿಧಾನದ ವಿಶಿಷ್ಟತೆ ಬಗ್ಗೆ ಕಲಿಕಾ ಕೇಂದ್ರದ ಶಿಕ್ಷಕಿ ರಂಜಿತಾರವರು ಮಕ್ಕಳಿಗೆ ಮಾಹಿತಿ ನೀಡಿದರು. ಒಟ್ಟು 22 ಮಕ್ಕಳು ಭಾಗವಹಿಸಿದ್ದರು.

## "ಹನುಮಾನ್ ದೇವಸ್ಥಾನದ ಮಕ್ಕಳ ಮನೆ ಉದ್ಘಾಟನೆ ಕಾರ್ಯಕ್ರಮ"

21 ಜನವರಿ 2026ರಂದು ಯಡ್ರಾಮಿ ತಾಲೂಕಿನ ವಸ್ತರಿ ಗ್ರಾಮದ ಹನುಮಾನ್ ದೇವಸ್ಥಾನದ ಹತ್ತಿರ ಇರುವಂತ ಮಕ್ಕಳ ಮನೆಯನ್ನು ರಿಬ್ಬಿನ ಕಟ್ ಮಾಡುವ ಮೂಲಕ ಉದ್ಘಾಟನೆ ಮಾಡಿ ಕಾರ್ಯಕ್ರಮವನ್ನು ಚಾಲನೆ ನೀಡಲಾಯಿತು. ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ ವಾಸ್ ರವರು ಈ ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ತಿಳಿಸಿದರು. ಸೇವಾ ಸಂಗಮ ಮಕ್ಕಳ ಮನೆ ಸ್ಥಾಪಿಸಲಾಯಿತು. ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಈ ಮಕ್ಕಳ ಮನೆಗೆ ಅವಕಾಶ ಇರುವುದು. ಮಕ್ಕಳ ಮನೆಯ ಉದ್ದೇಶಗಳು ಪ್ರತಿಯೊಂದು ಗ್ರಾಮದಲ್ಲಿ ಏಳು ತಿಂಗಳಯಿಂದ ಮೂರು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಮಕ್ಕಳ ಮನೆಗಳಿಗೆ ಪ್ರವೇಶವನ್ನು ಸಕ್ರಿಯಗೊಳಿಸುವುದು. ಮತ್ತು ಪೂರಕ ಆಹಾರ, ಬಾಲ್ಯದ ಅಭಿವೃದ್ಧಿ ಮತ್ತು ಸರ್ಕಾರದ ಯೋಜನೆಗಳಿಗೆ ಪ್ರವೇಶವನ್ನು ಸುಗಮಗೊಳಿಸುವುದು. ಹಾಗೂ ಬೆಳವಣಿಗೆ ಕುಂಠಿತ ಕಡಿಮೆ ತೂಕ ಮತ್ತು ಕ್ಷಣಿಸಿದ ಮಕ್ಕಳನ್ನು 7 ತಿಂಗಳು 3 ವರ್ಷದ ವಯಸ್ಸಿನ ಗುರುತಿಸುವುದು. ಅವರನ್ನು ಆರೋಗ್ಯ ಸೌಲಭ್ಯಗಳಿಗಾಗಿ ನೋಂದಾಯಿಸುವುದು. ಹಾಗೂ ಅನುಸರಣೆ ಮಾಡುವುದರ ಕುರಿತು ಮಾಹಿತಿಯನ್ನು ನೀಡಿದರು. ಗ್ರಾಮ ಪಂಚಾಯತ ಸದಸ್ಯರು ಶ್ರೀಯುತ ಗುರುನಾಥ ಅವರು ಈ ಮಕ್ಕಳ ಮನೆ ಎರಡನೆಯದಾಗಿ ಇಲ್ಲಿ ಉದ್ಘಾಟನೆಯನ್ನು ಮಾಡಿರುವಂತ ಸೇವಾ ಸಂಗಮ ಸಂಸ್ಥೆಯವರಿಗೆ ಧನ್ಯವಾದ ತಿಳಿಸಿದ್ದರು. ಮಕ್ಕಳಿಗೆ ಪ್ರತಿನಿತ್ಯ ಇಲ್ಲಿ ಕಳಿಸಿಕೊಡುವುದು ಮತ್ತು ನಾವು ನಮ್ಮ ಮಕ್ಕಳಿಗೆ ನೋಡೋಕ್ಕಿಂತ ಹೆಚ್ಚು ಇಲ್ಲಿ ಅವರು ಕಾಳಜಿ ವಹಿಸುವದರ ಬಗ್ಗೆ ಗ್ರಾಮಸ್ಥ ತಾಯಂದಿರಿಗೆ ತಿಳಿಸಿದರು.





## “ಮಕ್ಕಳ ಎತ್ತರ ಮತ್ತು ತೂಕ ಮಾಪನ ಕಾರ್ಯಕ್ರಮ”





ಯಡ್ರಾಮಿ ತಾಲೂಕಿನ ವಸ್ತರಿ ಮತ್ತು ಇಜೇರಿ ಗ್ರಾಮಗಳಲ್ಲಿ ಮಕ್ಕಳು ಮನೆ ಕಾರ್ಯಕ್ರಮ ಪ್ರಾರಂಭವಾಗಿದ್ದು. ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ಈ ಒಂದು ಮಕ್ಕಳ ಮನೆಯಲ್ಲಿ ಅವಕಾಶ ವಿರುವುದು. ಪ್ರತಿದಿನ ಮಕ್ಕಳಿಗೆ ಬೆಳಗಿನ ಉಪಹಾರ, ಮಧ್ಯಾಹ್ನದಲ್ಲಿ ಕಿಚಡಿ ಹಾಗೂ ಒಂದು ಮೊಟ್ಟೆ, ಸಾಯಂಕಾಲದ ಉಪಹಾರ ಉಪ್ಪಿಟ್ಟು ಅಥವಾ ಮತ್ತೊಂದು ದಿನ ಸಜಕಿ ನೀಡುವುದು. ಪ್ರತಿ ತಿಂಗಳು ಮಕ್ಕಳ ಎತ್ತರ ಮತ್ತು ತೂಕವನ್ನು ತಪಸಣೆ ಮಾಡಿ ವಯಸ್ಸಿಗೆ ತಕ್ಕಂತೆ ಬೆಳವಣಿಗೆ ಆಗದೆ ಇರುವಂತಹ ಮಕ್ಕಳಿಗೆ ಗುರುತಿಸುವದು. ಆ ಮಕ್ಕಳಿಗೆ ಪ್ರತಿದಿನ ಟೈಮ್ ಟು ಟೈಮ್ ಊಟವನ್ನು ನೀಡುವುದು ಹಾಗೂ ಪ್ರತಿ ತಿಂಗಳ ಪಾಲಕರ ಸಭೆಮಾಡಿ ಮಕ್ಕಳ ಬೆಳವಣಿಗೆ ಮತ್ತು ಕುಂದು ಕೊರತೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವುದು ಎಂದು ತಿಳಿಸಿದ್ದರು.

## “ಯಡ್ರಾಮಿ ತಾಲೂಕು ಕಚೇರಿಯಲ್ಲಿ ಆರೈಕೆದಾರರ ಮಾಸಿಕ ಸಭೆ”



28 ಜನವರಿ 2026ರಂದು ಯಡ್ರಾಮಿ ತಾಲೂಕು ಕಚೇರಿಯಲ್ಲಿ ಆರೈಕೆದಾರರ ಮಾಸಿಕ ಸಭೆ ಹಮ್ಮಿಕೊಳ್ಳಲಾಯಿತು. ಆರೈಕೆದಾರರು ತಮ್ಮ ಒಂದು ತಿಂಗಳ ಕಾರ್ಯಗಳ ಅನುಭವದ ಜೊತೆಗೆ ಇರುವಂತಹ ಎಲ್ಲರ ಜೊತೆ ಹಂಚಿಕೊಂಡರು. ಆರೈಕೆದಾರರ ಎಲ್ಲಾ ಪ್ರಶ್ನೆಗಳಿಗೂ ಮತ್ತು ಸಮಸ್ಯೆಗಳು ಗುರುರಾಜ ಸರ್ ಮತ್ತು ರಂಗನಾಥರವರು ಪರಿಹಾರವನ್ನು ನೀಡುತ್ತಾ ಕೇಂದ್ರದಲ್ಲಿ ಇನ್ನೂ ಮಕ್ಕಳಿಗೆ ಹೆಚ್ಚಿನ ಚಟುವಟಿಕೆ ಮಾಡಲು ಆಟಗಳನ್ನು ಯಾವರೀತಿ ಆಡಿಸಬೇಕು ಮತ್ತು ಮಕ್ಕಳಿಗೆ ಕೆಲವೊಂದು ಹಾಡುಗಳನ್ನು ಹಾಡಿಸುತ್ತಾ ಅಭಿನಯ ಮಾಡಲು ಕಲಿಸಿ ಕೊಡಲಾಯಿತು. ಅದರ ಜೊತೆಗೆ ಬೆಳಗಿನ ಉಪಹಾರದ ಸತುಪ್ರಾಯೋಗಿಕವಾಗಿ ಉಪಹಾರ ಮಾಡಿತೋರಿಸಲಾಯಿತು. ರಕ್ಷಣೆ, ಪೋಷಕಾಂಶ ಆಹಾರ ಆರೋಗ್ಯ ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು ಈ ಸಭೆಯಲ್ಲಿ ಅಜೀಂ ಪ್ರೇಮಜಿ ಸಂಸ್ಥೆ ಗುರುರಾಜ ಗ್ಲಾಡ್ಸನ್ಸರ್, ರಂಗನಾಥ್, ಡಾನ್ ಬಾಸ್ಕೋ ಸಂಸ್ಥೆಯ ಫಾದರ ಕುರಿಯಾಕೋರವರು ಈ ಒಂದು ಸಭೆಯಲ್ಲಿ ಭಾಗವಹಿಸಿದರು. ಜೊತೆಗೆ ಸೇವಾ ಸಂಗಮ ಸಂಸ್ಥೆ ಸಿಬ್ಬಂದಿಗಳು ಹಾಗೂ ಡಾನ್ ಬಾಸ್ಕೋ ಸಂಸ್ಥೆಯ ಸಿಬ್ಬಂದಿಗಳು ಮತ್ತು ಎರಡು ತಾಲೂಕ ಆರೈಕೆದಾರರು ಒಟ್ಟು 24 ಜನ ಸಭೆಯಲ್ಲಿ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## DONATE TO:

**For Indian Citizens Only**

For Indian Citizens Only

Bank Name : HDFC
Bank A/c No : 50100649372471
Bank Branch : Humnabad
IFSC Code : HDFC0002411

**For Donation from Foreign Passport Holder only:**

Account Holder Name:
Organizaion of Bidar Integral Transformation

Account No : 40158110346
Branch : New Delhi
IFSC Code : SBIN0000691
Swift code : SBINBB104

State bank of India, New Delhi
Donation to ORBIT are eligible for tax Exemption under 80G. Donors must provide full name, address, Contact and PAN Number to the Organization.

## You Can Support

- Rehabilitation of People with mental illness.
- Nutrition support to children with delay in development
- Livelihood /IGP Training for men, women and youth.
- Reconstuctive surgery for individuals with disabilities
- Aids & Appliances for the Diffrently abled.
- Skill training for youth, disabled and people with mental illness
- Health Camps & treatments
- Blood donation camp
- Eye & Organ donation camps
- Walkthon for HIV/AIDS awareness and support for individuals with disabilities
- Corpus fund for the Organization.
- Greening the Future by Planting the Saplings on every Environment Day

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.




**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೆಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in